# ಕರ್ನಾಟಕ ಲೋಕಾಯುಕ್ತ

**ಸಂ.ಕಂಪ್ಲೇಂಟ್/ಲೋಕ್/ಬಿಜಿಎಂ/3003/2022**
**ಪಿ.ಓ. ಎ.ಆರ್.ಇ–06 (ಮಂಡನಾಧಿಕಾರಿಯವರ ಶಾಖೆ.)**

ಬಹುಮಹಡಿಗಳ ಕಟ್ಟಡ,
ಡಾ॥ ಬಿ.ಆರ್. ಅಂಬೇಡ್ಕರ್ ವೀದಿ,
ಬೆಂಗಳೂರು, ದಿನಾಂಕ: 08/03/2023.
10

## ಕರ್ನಾಟಕ ಲೋಕಾಯುಕ್ತ ಕಾಯಿದೆ 1984 ರ ಕಲಂ 12(3) ರ ಅನ್ವಯ ಶಿಫಾರಸು ವರದಿ

ವಿಷಯ: **1) ಶ್ರೀ. ಶಂಕರ ದಾದಾ ಪಾಟೀಲ ಬಿನ್ ದಾದಾ ಪಾಟೀಲ,** ಅಧ್ಯಕ್ಷರು, ಗ್ರಾಮ ಪಂಚಾಯತ್ ಬೇಡಕಿಹಾಳ ಸಾ॥ ಬೇಡಕಿಹಾಳ, ತಾ॥ ಚಿಕ್ಕೋಡಿ, ಬೆಳಗಾವಿ ಜಿಲ್ಲೆ, **2) ಶ್ರೀ. ಬಸಪ್ರಭು ಮಲ್ಲಪ್ಪ ಪಾಟೀಲ ಬಿನ್ ಮಲ್ಲಪ್ಪ ಪಾಟೀಲ,** ಪಿಡಿಓ/ ಕಾರ್ಯದರ್ಶಿ, ಗ್ರಾಮ ಪಂಚಾಯತ್ ಬೇಡಕಿಹಾಳ ಸಾ॥ ಬೇಡಕಿಹಾಳ, ತಾ॥ ಚಿಕ್ಕೋಡಿ, ಬೆಳಗಾವಿ ಜಿಲ್ಲೆ, **3) ಶ್ರೀ. ಪ್ರಭಾಕರ ಕಾಶಿನಾಥ ಕಾಕಡೆ ಬಿನ್ ಕಾಶಿನಾಥ ಕಾಕಡೆ, ಬಿಲ್ ಕ್ಲರ್ಕ್,** ಗ್ರಾಮ ಪಂಚಾಯತ್ ಬೇಡಕಿಹಾಳ ಸಾ॥ ಬೇಡಕಿಹಾಳ, ತಾ॥ ಚಿಕ್ಕೋಡಿ, ಬೆಳಗಾವಿ ಜಿಲ್ಲೆ, **4) ಶ್ರೀ. ಸಂದೀಪ ಬಾಳಸಾಹೇಬ ಬಾಬರ ಬಿನ್ ಬಾಳಸಾಹೇಬ ಬಾಬರ,** ದಲಾಯತ್, ಗ್ರಾಮ ಪಂಚಾಯತ್, ಬೇಡಕಿಹಾಳ ಸಾ॥ ಬೇಡಕಿಹಾಳ, ತಾ॥ ಚಿಕ್ಕೋಡಿ, ಬೆಳಗಾವಿ ಜಿಲ್ಲೆ, **5) ಶ್ರೀ. ರಾಜು ಸುಶೀಲ ಢಂಗ ಬಿನ್ ಶ್ರೀಮತಿ. ಸುಶೀಲ ಢಂಗ,** ಕಿರಿಯ ಅಭಿಯಂತರರು / ಸೆಕ್ಷನ್ ಆಫೀಸರ್, ಗ್ರಾಮ ಪಂಚಾಯತ್ ಬೇಡಕಿಹಾಳ, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಉಪವಿಭಾಗ, ಚಿಕ್ಕೋಡಿ, ಬೆಳಗಾವಿ ಜಿಲ್ಲೆ ಮತ್ತು **6) ಶ್ರೀ. ರುದ್ರಮುನಿಸ್ವಾಮಿ ಮಲ್ಲಯ್ಯ ಚಿಕ್ಕಮಠ ಬಿನ್ ಮಲ್ಲಯ್ಯ ಚಿಕ್ಕಮಠ,** ಸಹಾಯಕ ಕಾರ್ಯಪಾಲಕ ಅಭಿಯಂತರರು, ಪಂಚಾಯತ್ ರಾಜ್ ಇಂಜಿನಿಯರಿಂಗ್ ಉಪವಿಭಾಗ, ಚಿಕ್ಕೋಡಿ, ಬೆಳಗಾವಿ ಜಿಲ್ಲೆರವರುಗಳು ಕರ್ತವ್ಯಲೋಪ/ ದುರ್ವರ್ತನೆ ತೋರಿದ ಬಗ್ಗೆ.

******

ಬೆಳಗಾವಿ ಕರ್ನಾಟಕ ಲೋಕಾಯುಕ್ತ ಪೋಲಿಸ್ ಠಾಣೆಯ ಪೋಲೀಸ್ ನಿರೀಕ್ಷಕರು (ಇನ್ನು ಮುಂದೆ 'ತನಿಖಾಧಿಕಾರಿ' ಎಂದು ಕರೆಯಲ್ಪಡುತ್ತಾರೆ) ಇವರು ಸಲ್ಲಿಸಿದ ತನಿಖಾ ವರದಿ ಮತ್ತು ಸಂಬಂಧಿಸಿದ ದಾಖಲೆಗಳನ್ನು ಪರಿಶೀಲಿಸಲಾಗಿ **1) ಶ್ರೀ. ಶಂಕರ ದಾದಾ ಪಾಟೀಲ ಬಿನ್ ದಾದಾ ಪಾಟೀಲ,** ಅಧ್ಯಕ್ಷರು, ಗ್ರಾಮ ಪಂಚಾಯತ್ ಬೇಡಕಿಹಾಳ ಸಾ॥ ಬೇಡಕಿಹಾಳ, ತಾ॥ ಚಿಕ್ಕೋಡಿ, ಬೆಳಗಾವಿ ಜಿಲ್ಲೆ, **2) ಶ್ರೀ. ಬಸಪ್ರಭು ಮಲ್ಲಪ್ಪ ಪಾಟೀಲ ಬಿನ್**

**ಮಲ್ಲಪ್ಪ ಪಾಟೀಲ,** ಪಿಡಿಓ/ ಕಾರ್ಯದರ್ಶಿ, ಗ್ರಾಮ ಪಂಚಾಯತ್ ಬೇಡಕಿಹಾಳ ಸಾ॥ ಬೇಡಕಿಹಾಳ, ತಾ॥ ಚಿಕ್ಕೋಡಿ, ಬೆಳಗಾವಿ ಜಿಲ್ಲೆ, 3) **ಶ್ರೀ. ಪ್ರಭಾಕರ ಕಾಶಿನಾಥ ಕಾಕಡೆ ಬಿನ್ ಕಾಶಿನಾಥ ಕಾಕಡೆ, ಬಿಲ್ ಕ್ಲರ್ಕ್,** ಗ್ರಾಮ ಪಂಚಾಯತ್ ಬೇಡಕಿಹಾಳ ಸಾ॥ ಬೇಡಕಿಹಾಳ, ತಾ॥ ಚಿಕ್ಕೋಡಿ, ಬೆಳಗಾವಿ ಜಿಲ್ಲೆ, 4) **ಶ್ರೀ. ಸಂದೀಪ ಬಾಳಸಾಹೇಬ ಬಾಬರ ಬಿನ್ ಬಾಳಸಾಹೇಬ ಬಾಬರ, ದಲಾಯತ್,** ಗ್ರಾಮ ಪಂಚಾಯತ್, ಬೇಡಕಿಹಾಳ ಸಾ॥ ಬೇಡಕಿಹಾಳ, ತಾ॥ ಚಿಕ್ಕೋಡಿ, ಬೆಳಗಾವಿ ಜಿಲ್ಲೆ, 5) **ಶ್ರೀ. ರಾಜು ಸುಶೀಲ ಢಂಗ ಬಿನ್ ಶ್ರೀಮತಿ. ಸುಶೀಲ ಢಂಗ,** ಕಿರಿಯ ಅಭಿಯಂತರರು / ಸೆಕ್ಷನ್ ಆಫೀಸರ್, ಗ್ರಾಮ ಪಂಚಾಯತ್ ಬೇಡಕಿಹಾಳ, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಉಪವಿಭಾಗ, ಚಿಕ್ಕೋಡಿ, ಬೆಳಗಾವಿ ಜಿಲ್ಲೆ ಮತ್ತು 6) **ಶ್ರೀ. ರುದ್ರಮುನಿಸ್ವಾಮಿ ಮಲ್ಲಯ್ಯ ಚಿಕ್ಕಮಠ ಬಿನ್ ಮಲ್ಲಯ್ಯ ಚಿಕ್ಕಮಠ, ಸಹಾಯಕ ಕಾರ್ಯಪಾಲಕ ಅಭಿಯಂತರರು, ಪಂಚಾಯತ್ ರಾಜ್ ಇಂಜಿನಿಯರಿಂಗ್ ಉಪವಿಭಾಗ, ಚಿಕ್ಕೋಡಿ, ಬೆಳಗಾವಿ ಜಿಲ್ಲೆ,** (ಇನ್ನು ಮುಂದೆ ಕ್ರಮವಾಗಿ 1 ರಿಂದ 6ನೇ 'ಎದುರುದಾರರು' ಎಂದು ಕರೆಯಲ್ಪಡುತ್ತಾರೆ). ಶ್ರೀ. **ರಾಮಚಂದ್ರ ಗಂಗಾರಾಮ ಡೊಮಣೆ,** ಸಾ॥ ಬೇಡಕಿಹಾಳ, ತಾ॥ ಚಿಕ್ಕೋಡಿ, ಬೆಳಗಾವಿ ಜಿಲ್ಲೆ (ಇನ್ನು ಮುಂದೆ 'ದೂರುದಾರರು' ಎಂದು ಕರೆಯಲ್ಪಡುತ್ತಾರೆ) ಇವರು ಮೇಲ್ಕಂಡ ಎದುರುದಾರರುಗಳ ವಿರುದ್ಧ ದೂರು ನೀಡಿದ ಮೇರೆಗೆ ತನಿಖಾಧಿಕಾರಿಯವರು ತನಿಖೆ ಕೈಗೊಂಡು ಎದುರುದಾರರುಗಳು ಅಧಿಕಾರ ದುರುಪಯೋಗ ಪಡಿಸಿಕೊಂಡು ಬೇಡಕಿಹಾಳಗ್ರಾಮ ಪಂಚಾಯತಿ, ಚಿಕ್ಕೋಡಿ ತಾಲ್ಲೂಕಿಗೆ ಸಂಬಂಧಪಟ್ಟಂತೆ ನಾಲ್ಕು ಕಾಮಗಾರಿಗಳ ಬಗ್ಗೆ ಕಾಮಗಾರಿ ಕೈಗೊಳ್ಳದೆ ಪಿ.ಎಂ.ಜಿ.ಎಸ್.ವೈ. ಯೋಜನೆ ಅಡಿಯಲ್ಲಿ ಕಾಮಗಾರಿ ಪೂರ್ಣಗೊಳಿಸಲಾಗಿದೆ ಎಂದು ತೋರಿಸಿ, ಸರ್ಕಾರದ ಬೊಕ್ಕಸಕ್ಕೆ ಆರ್ಥಿಕ ನಷ್ಟವುಂಟುಮಾಡಿರುತ್ತಾರೆಂದು ವರದಿ ಸಲ್ಲಿಸಿದ ಮೇರೆಗೆ ದಾಖಲಾತಿಗಳನ್ನು ಪರಿಶೀಲಿಸಿದಾಗ ಎದುರುದಾರರುಗಳು ಅವರ ಸೇವಾ ಅವಧಿಯಲ್ಲಿ ಅಧಿಕಾರವನ್ನು ದುರುಪಯೋಗಪಡಿಸಿಕೊಂಡು ಕರ್ತವ್ಯದಲ್ಲಿ ಲೋಪವೆಸಗಿ ದುರ್ನಡತೆ / ದುರ್ವರ್ತನೆ ತೋರಿಸಿರುವುದು ಕಂಡುಬಂದಿದ್ದರಿಂದ ಕರ್ನಾಟಕ ಲೋಕಾಯುಕ್ತ ಕಾಯ್ದೆ 1984ರ ಕಲಂ 7(1)(ಬಿ)ರಡಿಯಲ್ಲಿ ತನಿಖೆ ಕೈಗೊಂಡಿದೆ.

**2. ಪ್ರಕರಣದ ಸಂಕ್ಷಿಪ್ತ ಸಾರಾಂಶ:–**

i) ದೂರುದಾರರಾದ **ಶ್ರೀ. ರಾಮಚಂದ್ರ ಗಂಗಾರಾಮ ಡೊಮಣೆ,** ಸಾ॥ ಬೇಡಕಿಹಾಳ, ತಾ॥ ಚಿಕ್ಕೋಡಿ, ಬೆಳಗಾವಿ ಜಿಲ್ಲೆರವರ ದೂರಿನಲ್ಲಿ ಅವರು ಬೇಡಕಿಹಾಳಗ್ರಾಮದ ಗ್ರಾಮಸ್ಥ ಮತ್ತು ಗ್ರಾಮ ಪಂಚಾಯಿತಿಯ ಸದಸ್ಯನಾಗಿದ್ದು,

ಸಂ.ಕಂಪ್ಲೇಂಟ್/ಲೋಕ್/ಬಿಜಿಎಂ/3003/2022
ಪಿ.ಓ. ಎ.ಆರ್.ಇ-06

ಕೇಂದ್ರ ಸರ್ಕಾರವು ಉದ್ಯೋಗ ಖಾತ್ರಿ ಯೋಜನೆ ಮತ್ತು ಎಂ.ಜಿ.ಎನ್.ಆರ್.ಇ.ಎಸ್. ಯೋಜನೆಯಡಿ ಬೇಡಕಿಹಾಳಗ್ರಾಮ ಪಂಚಾಯಿತಿಗೆ ಕೆಲವೊಂದು ಕಾಮಗಾರಿಗಳನ್ನು ನೀಡಿದ್ದು, ಆ ಕಾಮಗಾರಿಗಳ ಬಗ್ಗೆ ಬೇಡಕಿಹಾಳ ಗ್ರಾಮ ಪಂಚಾಯಿತಿಯಲ್ಲಿ ಆಕ್ಷನ್ ಪ್ಲಾನ್‌ನ್ನು ತಯಾರಿಸಲಾಗಿರುತ್ತದೆ.

(1) ಬೇಡಕಿಹಾಳಗ್ರಾಮದಲ್ಲಿ ಗ್ರಾಮ ಪಂಚಾಯಿತಿ ವತಿಯಿಂದ 2010-11ನೇ ಸಾಲಿನಲ್ಲಿ ಶ್ರೀ. ದೇಸಾಯಿರವರ ಪ್ಲಾಟ್‌ನಿಂದ ಶ್ರೀ. ಎಸ್. ಎಸ್. ಪಾಟೀಲರವರ ಪ್ಲಾಟ್‌ವರೆಗೆ ರಸ್ತೆಗೆ ಖಡೀಕರಣ ಮಾಡುವ ಕಾಮಗಾರಿಯನ್ನು (ಸದರಿ ಕೆಲಸದ ಕೋಡ್ 1504004030 / ಆರ್. ಸಿ./ 99468902) ಒಂದು ಲಕ್ಷ ರೂ.ಗಳಿಗೆ ನಿಗಧಿ ಪಡಿಸಿದ್ದು ಇರುತ್ತದೆ. ಅಲ್ಲಿ ಯಾವುದೇ ಕಾಮಗಾರಿಯನ್ನು ಕೈಗೊಳ್ಳದೇ, ಕೂಲಿಕಾರರ ಖೊಟ್ಟಿ ಸಹಿಗಳನ್ನು ಮಸ್ಟರ್ ರೋಲ್‌ಗೆ ಪಡೆದುಕೊಂಡು ಅದಕ್ಕೆ ಅನುಗುಣವಾಗಿ ಎಂ.ಬಿ. ಯನ್ನು ಬರೆದು 1,00,000/- ರೂ.ಗಳನ್ನು ಡ್ರಾ ಮಾಡಿಕೊಂಡಿರುತ್ತಾರೆಂದು ತಿಳಿಸಿರುತ್ತಾರೆ.

(2) ಬೇಡಕಿಹಾಳಗ್ರಾಮದಲ್ಲಿ ಗ್ರಾಮ ಪಂಚಾಯಿತಿ ವತಿಯಿಂದ 2010-11ನೇ ಸಾಲಿನಲ್ಲಿ ಶ್ರೀ. ಶಾಸ್ತ್ರೀ ಪ್ಲಾಟ್‌ನಲ್ಲಿ 4 ರಸ್ತೆಗಳಿಗೆ ಖಡೀಕರಣ ಕಾಮಗಾರಿಯನ್ನು (ಸದರಿ ಕೆಲಸದ ಕೋಡ್ 1504004030 / ಆರ್. ಸಿ./ 992248650639) ಎರಡು ಲಕ್ಷ ರೂ.ಗಳಿಗೆ ನಿಗದಿ ಪಡಿಸಿದ್ದು ಇರುತ್ತದೆ. ಅಲ್ಲಿ ಯಾವುದೇ ಕಾಮಗಾರಿಯನ್ನು ಕೈಗೊಳ್ಳದೇ, ಕೂಲಿಕಾರರ ಖೊಟ್ಟಿ ಸಹಿಗಳನ್ನು ಮಸ್ಟರ್ ರೋಲ್‌ಗೆ ಪಡೆದುಕೊಂಡು ಅದಕ್ಕೆ ಅನುಗುಣವಾಗಿ ಎಂ.ಬಿ.ಯನ್ನು ಬರೆದು 1,83,078/- ರೂ.ಗಳನ್ನು ಡ್ರಾ ಮಾಡಿಕೊಂಡಿರುತ್ತಾರೆಂದು ತಿಳಿಸಿರುತ್ತಾರೆ.

(3) ಬೇಡಕಿಹಾಳಗ್ರಾಮದಲ್ಲಿ ಗ್ರಾಮ ಪಂಚಾಯಿತಿ ವತಿಯಿಂದ 2010-11ನೇ ಸಾಲಿನಲ್ಲಿ ಬೇಡಕಿಹಾಳ - ಗಳತಗಾ ರೋಡಿನಿಂದ ಶ್ರೀಪತಿ ಪಾಟೀಲರ ಬಾವಿಯವರೆಗೆ ರಸ್ತೆಗೆ ಖಡೀಕರಣ ಮಾಡುವ ಕಾಮಗಾರಿಯನ್ನು (ಸದರಿ ಕೆಲಸದ ಕೋಡ್ 1504004030 / ಆರ್. ಸಿ./ 992248644461) ಮೂರು ಲಕ್ಷ ರೂ.ಗಳಿಗೆ ನಿಗದಿ ಪಡೆಸಿದ್ದು ಇರುತ್ತದೆ. ಅಲ್ಲಿ ಯಾವುದೇ ಕಾಮಗಾರಿಯನ್ನು ಕೈಗೊಳ್ಳದೇ ಕೂಲಿಕಾರರ ಖೊಟ್ಟಿ ಸಹಿಗಳನ್ನು ಮಸ್ಟರ್ ರೋಲ್‌ಗೆ ಪಡೆದುಕೊಂಡು ಅದಕ್ಕೆ ಅನುಗುಣವಾಗಿ ಎಂ.ಬಿ.ಯನ್ನು ಬರೆದು 2,78,436/- ರೂ.ಗಳನ್ನು ಡ್ರಾ ಮಾಡಿಕೊಂಡಿರುತ್ತಾರೆಂದು ತಿಳಿಸಿರುತ್ತಾರೆ.

(4) ಬೇಡಕಿಹಾಳಗ್ರಾಮದಲ್ಲಿ ಗ್ರಾಮ ಪಂಚಾಯಿತಿ ವತಿಯಿಂದ 2010-11ನೇ ಸಾಲಿನಲ್ಲಿ ಗಣಪತಿ ದೇವಸ್ಥಾನದಿಂದ ಬೇಡಕಿಹಾಳಗ್ರಾಮದ ನಾಲಾದವರೆಗೆ ಚರಂಡಿ ನಿರ್ಮಾಣದ ಕಾಮಗಾರಿಯನ್ನು (ಸದರಿ ಕೆಲಸದ ಕೋಡ್ 1504004030 / ಎಫ್.ಇ./ 92094) 1,00,000/- ರೂ.ಗಳಿಗೆ ನಿಗದಿಪಡಿಸಿ, ಅಲ್ಲಿ ಯಾವುದೇ ಕಾಮಗಾರಿಯನ್ನು ಕೈಗೊಳ್ಳದೇ ಕೂಲಿಕಾರರ ಖೊಟ್ಟಿ ಸಹಿಗಳನ್ನು ಮಸ್ಟರ್ ರೋಲ್‌ಗೆ ಪಡೆದುಕೊಂಡು ಅದಕ್ಕೆ ಅನುಗುಣವಾಗಿ ಎಂ.ಬಿ.ಯನ್ನು ಬರೆದು 52,870/- ರೂ.ಗಳನ್ನು ಡ್ರಾ ಮಾಡಿಕೊಳ್ಳಲು ಪ್ರಯತ್ನಿಸುತ್ತಿರುವಾಗ ದೂರುದಾರರು ತಕರಾರು ಮಾಡಿದ್ದರಿಂದ, ಯಾವುದೇ ಹಣವನ್ನು ಡ್ರಾ ಮಾಡಿಕೊಂಡಿರುವುದಿಲ್ಲವೆಂದು ತಿಳಿಸಿರುತ್ತಾರೆ. **(ಈ ಕಾಮಗಾರಿಯನ್ನು ಬೇಡಕಿಹಾಳಗ್ರಾಮದಲ್ಲಿ ಗ್ರಾಮ ಪಂಚಾಯಿತಿ ವತಿಯಿಂದ 2009-10ನೇ ಸಾಲಿನಲ್ಲಿ ಕೈಗೊಂಡಿದ್ದು ಅದಕ್ಕಾಗಿ 5,63,737/- ರೂ. ಗಳನ್ನು ಖರ್ಚುಮಾಡಿ, ಕಾಮಗಾರಿಯನ್ನು ಪೂರ್ಣಗೊಳಿಸಿರುತ್ತಾರೆ.)**

ಎದುರುದಾರರುಗಳು ಮೇಲ್ಕಂಡ ನಾಲ್ಕು ಕಾಮಗಾರಿಗಳನ್ನು ಕೈಗೊಳ್ಳದೇ ಕೂಲಿಕಾರರ ಖೊಟ್ಟಿ ಸಹಿಗಳನ್ನು ಮಸ್ಟರ್ ರೋಲ್‌ಗೆ ಪಡೆದುಕೊಂಡು ಅದಕ್ಕೆ ಅನುಗುಣವಾಗಿ ಎಂ.ಬಿ.ಯನ್ನು ಬರೆದು ಒಟ್ಟು 6,08,514/- ರೂ.ಗಳನ್ನು ಡ್ರಾ ಮಾಡಿಕೊಳ್ಳುವ ಮೂಲಕ ಸರ್ಕಾರಕ್ಕೆ ಆರ್ಥಿಕ ನಷ್ಟವುಂಟುಮಾಡಿರುತ್ತಾರೆಂದು ದೂರುದಾರರು ಬೆಳಗಾವಿ ನ್ಯಾಯಾಲಯದಲ್ಲಿ ದೂರು ಸಲ್ಲಿಸಿದ್ದು, ಸದರಿ ದೂರನ್ನು ಮಾನ್ಯ ನ್ಯಾಯಾಧೀಶರು ಸಿ.ಆರ್.ಪಿ.ಸಿ. ಕಲಂ 156(3)ರನ್ವಯ ತನಿಖೆ ಕೈಗೊಂಡು ವರದಿ ಸಲ್ಲಿಸಲು ಪೊಲೀಸ್ ನಿರೀಕ್ಷಕರು, ಕರ್ನಾಟಕ ಲೋಕಾಯುಕ್ತ ಬೆಳಗಾವಿರವರಿಗೆ ಆದೇಶ ಮಾಡಿದ ಮೇರೆಗೆ ಅವರು ಅವರ ಠಾಣೆಯ ಗುನ್ನೆ ನಂ. 05/2012ರಲ್ಲಿ ಕಲಂ 7, 13(1)(ಸಿ) ಸಹಿತ 13(2) ಲಂಚ ಪ್ರತಿಬಂಧಕ ಕಾಯ್ದೆ 1988 ಮತ್ತು ಕಲಂ.409, 465, 467, 468, 471, 477(ಎ), 420 ಮತ್ತು 120(ಬಿ) ಭಾರತೀಯ ದಂಡ ಸಂಹಿತೆಯಡಿಯಲ್ಲಿ ಎದುರುದಾರರುಗಳ ವಿರುದ್ಧ ಪ್ರಕರಣವನ್ನು ದಾಖಲಿಸಿ ತನಿಖೆ ಕೈಗೊಂಡಿರುತ್ತಾರೆ.

ii) ದಿನಾಂಕ 27/04/2012ರಂದು ತನಿಖಾಧಿಕಾರಿಯವರು ಪಂಚಸಾಕ್ಷಿದಾರರಾದ (1) ಶ್ರೀ. ಮನೋಜ ಸುರೇಶ ಕಾವಳೇಕರ, ಸಹಾಯಕ ಇಂಜಿನಿಯರ್, ಸಹಾಯಕ ಕಾರ್ಯನಿರ್ವಾಹಕ ಅಭಿಯಂತರವರ ಕಛೇರಿ, ಲೋ.ಬಂ. ಹಾಗೂ ಒ.ಜ.ಸಾ. ಇಲಾಖೆ, ಉಪವಿಭಾಗ ನಂ.1, ಬೆಳಗಾವಿ ಮತ್ತು

(2) ಶ್ರೀ. ವಿಶ್ವನಾಥ್ ರೇವಪ್ಪ ಕಂಬಾರ, ಪ್ರ.ದ.ಸ., ಸಹನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಳಗಾವಿ ಇವರುಗಳನ್ನು ಠಾಣೆಗೆ ಕರೆಯಿಸಿ ಅವರಿಗೆ ದೂರಿನ ಸಂಕ್ಷಿಪ್ತ ಮಾಹಿತಿಯನ್ನು ನೀಡಿ ಪಂಚರಾಗಿ ಸಹಕರಿಸಬೇಕೆಂದು ತಿಳಿಸಿದಾಗ ಅವರು ಪಂಚರಾಗಿ ಸಹಕರಿಸಲು ಒಪ್ಪಿರುತ್ತಾರೆ. ನಂತರ, ತನಿಖಾಧಿಕಾರಿಯವರು ಪಂಚಸಾಕ್ಷಿದಾರರೊಂದಿಗೆ ಬೇಡಕಿಹಾಳಗ್ರಾಮ ಪಂಚಾಯಿತಿಗೆ ಬೆಳಿಗ್ಗೆ 11.30 ಗಂಟೆಗೆ ಬಂದಿರುತ್ತಾರೆ. ಆ ಸಮಯದಲ್ಲಿ ಗ್ರಾಮ ಪಂಚಾಯಿತಿಯಲ್ಲಿ ಶ್ರೀ. ಧರ್ಮಪ್ಪ ಚಂದಪ್ಪ ನಾಟೀಕರ, ಕಾರ್ಯ ನಿರ್ವಾಹಕ ಅಧಿಕಾರಿಗಳು, ತಾಲ್ಲೂಕು ಪಂಚಾಯಿತಿ, ಚಿಕ್ಕೋಡಿ ಮತ್ತು ಶ್ರೀ. ಬಸಪ್ರಭು ಮಲ್ಲಪ್ಪ ಪಾಟೀಲ, ಕಾರ್ಯದರ್ಶಿಗಳು, ಪ್ರಭಾರ ಪಂಚಾಯತ್ ಅಭಿವೃದ್ಧಿ ಅಧಿಕಾರಿ, ಬೇಡಕಿಹಾಳ ಇವರು ಹಾಜರಿರುತ್ತಾರೆ ಮತ್ತು ಅದೇ ಸಮಯಕ್ಕೆ ದೂರುದಾರರಾದ ಶ್ರೀ. ರಾಮಚಂದ್ರ ಗಂಗಾರಾಮ ಡೊಮಣಿರವರು ಬಂದಿರುತ್ತಾರೆ. ತನಿಖಾಧಿಕಾರಿಯವರು ಎಲ್ಲರ ಸಮಕ್ಷಮ ದೂರಿನ ಅಂಶವನ್ನು ತಿಳಿಸಿ, ದೂರಿನಲ್ಲಿ ನಮೂದಿಸಿದ ನಾಲ್ಕು ಕಾಮಗಾರಿಗಳಿಗೆ ಸಂಬಂಧಿಸಿದ ಕಾಮಗಾರಿಗಳ ಕಡತಗಳು, ಎಂ.ಬಿ. ಪುಸ್ತಕಗಳು, ನಡವಳಿಕೆ ಪುಸ್ತಕ, ಗ್ರಾಮ ಸಭಾ ನಡವಳಿಕೆ ಪುಸ್ತಕ, ಕ್ರಿಯಾ ಯೋಜನೆ ಕಡತ, ಕ್ಯಾಷ್ ಪುಸ್ತಕ, ಬೇಡಕಿಹಾಳಗ್ರಾಮ ಪಂಚಾಯಿತಿ ಸದಸ್ಯರ ಪಟ್ಟಿ ಹಾಗೂ ಕಾಮಗಾರಿಗೆ ಸಂಬಂಧಿಸಿದ ಇತರೆ ಕಡತಗಳನ್ನು ಹಾಜರುಪಡಿಸಲು 2ನೇ ಎದುರುದಾರರಾದ ಶ್ರೀ. ಬಸಪ್ರಭು ಮಲ್ಲಪ್ಪ ಪಾಟೀಲ್‌ರವರಿಗೆ ತಿಳಿಸಿದ ಮೇರೆಗೆ ಅವರು ಈ ಕೆಳಕಂಡ ದಾಖಲೆಗಳನ್ನು ಹಾಜರುಪಡಿಸಿರುತ್ತಾರೆ:-

(1) ಬೇಡಕಿಹಾಳಗ್ರಾಮದಲ್ಲಿ ಗ್ರಾಮ ಪಂಚಾಯಿತಿ ವತಿಯಿಂದ 2010-11ನೇ ಸಾಲಿನಲ್ಲಿ ಶ್ರೀ. ದೇಸಾಯಿರವರ ಪ್ಲಾಟ್‌ನಿಂದ ಶ್ರೀ. ಎಸ್. ಎಸ್. ಪಾಟೀಲರವರ ಪ್ಲಾಟ್‌ವರೆಗೆ ರಸ್ತೆಗೆ ಖಡೀಕರಣ ಮಾಡುವ ಕಾಮಗಾರಿಯ ಕಡತ ನಿರ್ಮಾಣ: ಅಂದಾಜು ಮೊತ್ತ 1,00,000/- ರೂ.

ಸದರಿ ಕಡತದಲ್ಲಿ ಒಟ್ಟು 26 ಹಾಳೆಗಳಿದ್ದು, ಅವುಗಳಲ್ಲಿ ಕಾಮಗಾರಿಯು ಪೂರ್ಣಗೊಂಡ ಬಗ್ಗೆ ನೀಡಿದ ಪ್ರಮಾಣ ಪತ್ರ, ಫಾರಂ ನಂ.24ರಲ್ಲಿ ಫಸ್ಟ್ ಮತ್ತು ಫೈನಲ್ ಬಿಲ್ ಸರ್ಟಿಫಿಕೇಟ್‌ಗಳು-3, ಬೇಡಕಿಹಾಳ ಪೋಸ್ಟ್ ಆಫೀಸ್ ರಶೀದಿ (ಚೆಕ್ ಮುಟ್ಟಿದ್ದರ ಬಗ್ಗೆ ನೀಡಿದ ರಶೀದಿ) 56,375/- ರೂ. ದಿ: 20/03/2011, ಎನ್.ಎಂ.ಆರ್. ನಂ.2804, ಪಾರ್ಟ್-3, ಕೆಲಸಕ್ಕಾಗಿ ಅರ್ಜಿ ಸಲ್ಲಿಸಿದ ನಮೂನೆ 6ರ ಫಾರಂಗಳು-2, ಕಾರ್ಯನಿರ್ವಾಹಕ

ಅಧಿಕಾರಿಗಳು, ತಾಲ್ಲೂಕು ಪಂಚಾಯಿತಿ, ಚಿಕ್ಕೋಡಿರವರು ದಿ: 22/11/2010 ರಂದು ನೀಡಿದ ಕಾಮಗಾರಿ ಪ್ರಾರಂಭ ಪತ್ರ, ಸಹಾಯಕ ಕಾರ್ಯಕಾರಿ ಅಭಿಯಂತರರು, ಪಂಚಾಯತ್ ರಾಜ್ ಇಂಜಿನಿಯರಿಂಗ್ ಉಪವಿಭಾಗ, ಚಿಕ್ಕೋಡಿರವರು ಕಾಮಗಾರಿಗೆ ನೀಡಿದ ತಾಂತ್ರಿಕ ಮಂಜೂರಾತಿ ಆದೇಶ, ಕಾಮಗಾರಿಯ ಅಂದಾಜು ಪತ್ರಿಕೆ ಮತ್ತು ಕಾಮಗಾರಿಯ 4 ಫೋಟೋಗಳು ಮತ್ತು ಅಳತೆ ಪುಸ್ತಕ ಸಂ: 1672 ಒಟ್ಟು 100 ಹಾಳೆಗಳಿದ್ದು, ಅದರಲ್ಲಿ ಪುಟ ಸಂಖ್ಯೆ 1 ರಿಂದ 35 ರವರೆಗೆ ಬರೆದಿರುತ್ತಾರೆ.

(2) ಬೇಡಕಿಹಾಳಗ್ರಾಮದಲ್ಲಿ ಗ್ರಾಮ ಪಂಚಾಯಿತಿ ವತಿಯಿಂದ 2010-11ನೇ ಸಾಲಿನಲ್ಲಿ ಶ್ರೀ. ಶಾಸ್ತ್ರೀ ಪ್ಲಾಟ್‌ನಲ್ಲಿ 4 ರಸ್ತೆಗಳಿಗೆ ಖಡೀಕರಣ ಕಾಮಗಾರಿಯ ಕಡತ ನಿರ್ಮಾಣ: ಅಂದಾಜು ಮೊತ್ತ ರೂ. 2,00,000/-.

ಸದರಿ ಕಡತದ ಮೇಲೆ ದ್ರಾವಣ ಬಿದ್ದು ಹೊಲಸು ಆಗಿರುತ್ತದೆ. ಕಡತದ ಪುಟಗಳು ಸಹ ಹೊಲಸಾಗಿರುತ್ತವೆ. ಸದರಿ ಕಡತದಲ್ಲಿ ಒಟ್ಟು 54 ಹಾಳೆಗಳಿದ್ದು, ಅವುಗಳಲ್ಲಿ ಕಾಮಗಾರಿಯು ಪೂರ್ಣಗೊಂಡ ಬಗ್ಗೆ ನೀಡಿದ ಪ್ರಮಾಣ ಪತ್ರ, ಕಾಮಗಾರಿಗಳ ತಪಾಸಣಾ ವರದಿ (3 ಹಾಳೆಗಳು ಶ್ರೀ. ಬಿ.ಎಂ. ನಾರಾಯಣಕರ, ವಲಯ ಅರಣ್ಯ ಅಧಿಕಾರಿಗಳು, ಹುಕ್ಕೇರಿ ವಲಯರವರು ನೀಡಿದ್ದು), ಫಾರಂ ನಂ.24ರಲ್ಲಿ ಫಸ್ಟ್ ಮತ್ತು ಫೈನಲ್ ಬಿಲ್ ಸರ್ಟಿಫಿಕೇಟ್‌ಗಳು-5, ಬೇಡಕಿಹಾಳ ಪೋಸ್ಟ್ ಆಫೀಸ್ ರಶೀದಿ (ಚೆಕ್ ಮುಟ್ಟಿದ್ದರ ಬಗ್ಗೆ ನೀಡಿದ ರಶೀದಿ) 50,250/- ರೂ. ದಿ: 21/03/2011, ಎನ್.ಎಂ.ಆರ್. ನಂ.4727, ಪಾರ್ಟ್-3, ಕೆಲಸಕ್ಕಾಗಿ ಅರ್ಜಿ ಸಲ್ಲಿಸಿದ ನಮೂನೆ 6ರ ಫಾರಂಗಳು-2, ಬೇಡಕಿಹಾಳ ಪೋಸ್ಟ್ ಆಫೀಸ್ ರಶೀದಿ (ಚೆಕ್ ಮುಟ್ಟಿದ್ದರ ಬಗ್ಗೆ ನೀಡಿದ ರಶೀದಿ) 62,125/- ರೂ. ದಿ: 15/03/2011, ಎನ್.ಎಂ.ಆರ್. ನಂ.4245, ಪಾರ್ಟ್-3, ಕೆಲಸಕ್ಕಾಗಿ ಅರ್ಜಿ ಸಲ್ಲಿಸಿದ ನಮೂನೆ 6ರ ಫಾರಂಗಳು-4, ಕಾರ್ಯನಿರ್ವಾಹಕ ಅಧಿಕಾರಿಗಳು, ತಾಲ್ಲೂಕು ಪಂಚಾಯಿತಿ, ಚಿಕ್ಕೋಡಿರವರು ದಿ: 28/02/2011 ರಂದು ನೀಡಿದ ಕಾಮಗಾರಿ ಪ್ರಾರಂಭ ಪತ್ರ, ಸಹಾಯಕ ಕಾರ್ಯಕಾರಿ ಅಭಿಯಂತರರು, ಪಂಚಾಯತ್ ರಾಜ್ ಇಂಜಿನಿಯರಿಂಗ್

ಉಪವಿಭಾಗ, ಚಿಕ್ಕೋಡಿರವರು ಕಾಮಗಾರಿಗೆ ನೀಡಿದ ತಾಂತ್ರಿಕ ಮಂಜೂರಾತಿ ಆದೇಶ, ಕಾಮಗಾರಿಯ ಅಂದಾಜು ಪತ್ರಿಕೆ ಮತ್ತು ಕಾಮಗಾರಿಯ 1 ಫೋಟೋ ಮತ್ತು ಅಳತೆ ಪುಸ್ತಕ ಸಂ: 1671 ಒಟ್ಟು 100 ಹಾಳೆಗಳಿದ್ದು, ಅದರಲ್ಲಿ ಪುಟ ಸಂಖ್ಯೆ 7, 8 ಮತ್ತು 17ರಲ್ಲಿ ಹಾಗೂ ಪುಟ ಸಂಖ್ಯೆ 21 ರಿಂದ 23ನೇ ಪುಟಗಳವರೆಗೆ ಬರೆದಿರುತ್ತದೆ.

(3) ಬೇಡಕಿಹಾಳಗ್ರಾಮದಲ್ಲಿ ಗ್ರಾಮ ಪಂಚಾಯಿತಿ ವತಿಯಿಂದ 2010-11ನೇ ಸಾಲಿನಲ್ಲಿ ಬೇಡಕಿಹಾಳ – ಗಳತಗಾ ರೋಡಿನಿಂದ ಶ್ರೀಪತಿ ಪಾಟೀಲರ ಬಾವಿಯವರೆಗೆ ರಸ್ತೆಗೆ ಖಡೀಕರಣ ಮಾಡುವ ಕಾಮಗಾರಿಯ ಕಡತ ನಿರ್ಮಾಣ: ಅಂದಾಜು ಮೊತ್ತ ರೂ.3,00,000/-.

ಸದರಿ ಕಡತದಲ್ಲಿ ಒಟ್ಟು 71 ಹಾಳೆಗಳಿದ್ದು, ಅವುಗಳಲ್ಲಿ ಕಾಮಗಾರಿಯು ಪೂರ್ಣಗೊಂಡ ಬಗ್ಗೆ ನೀಡಿದ ಪ್ರಮಾಣ ಪತ್ರ, ಕಾಮಗಾರಿಗಳ ತಪಾಸಣಾ ವರದಿ (3 ಹಾಳೆಗಳು ಶ್ರೀ. ಬಿ.ಎಂ. ನಾರಾಯಣಕರ, ವಲಯ ಅರಣ್ಯ ಅಧಿಕಾರಿಗಳು, ಹುಕ್ಕೇರಿ ವಲಯರವರು ನೀಡಿದ್ದು), ಫಾರಂ ನಂ.24ರಲ್ಲಿ ಫಸ್ಟ್ ಮತ್ತು ಫೈನಲ್ ಬಿಲ್ ಸರ್ಟಿಫಿಕೇಟ್‌ಗಳು-9, ಬೇಡಕಿಹಾಳ ಪೋಸ್ಟ್ ಆಫೀಸ್ ರಶೀದಿ (ಚೆಕ್ ಮುಟ್ಟಿದ್ದರ ಬಗ್ಗೆ ನೀಡಿದ ರಶೀದಿ) 6,375/- ರೂ. ದಿ: 17/03/2011, ಎನ್.ಎಂ.ಆರ್. ನಂ.3634, ಪಾರ್ಟ್-3, ಕೆಲಸಕ್ಕಾಗಿ ಅರ್ಜಿ ಸಲ್ಲಿಸಿದ ನಮೂನೆ-6ರ ಫಾರಂ-1, ಬ್ಯಾಂಕ್ ಬರೋಡದ ಜೆರಾಕ್ಸ್ ಚೆಕ್‌ನ ಪ್ರತಿ-1 (ಅಕೌಂಟ್ ನಂ.05240100000562 ಎಂದು ಬರೆದು ಮತ್ತು ರೂ.75,250/- ಎಂದು ಬರೆದು ರೌಂಡ್ ಮಾಡಿ, ತಿದ್ದುಪಡಿಮಾಡಿ ಮತ್ತೆ ರೂ.62,125/- ಎಂದು ಬರೆದು ಅದರ ಮೇಲೆ ಪಂಚಾಯತ್ ಅಭಿವೃದ್ಧಿ ಅಧಿಕಾರಿ ಹಾಗೂ ಅಧ್ಯಕ್ಷರು ಸಹಿ ಮಾಡಿದ್ದು, ದಿ: 23/02/2011 ಎಂದು ನಮೂದಿಸಲಾಗಿರುತ್ತದೆ), ಎನ್.ಎಂ.ಆರ್. ನಂ.2968, ಪಾರ್ಟ್-3, ಕೆಲಸಕ್ಕಾಗಿ ಅರ್ಜಿ ಸಲ್ಲಿಸಿದ ನಮೂನೆ 6ರ ಫಾರಂಗಳು-2, ಬ್ಯಾಂಕ್ ಆಫ್ ಬರೋಡದ ಜೆರಾಕ್ಸ್ ಚೆಕ್‌ನ ಪ್ರತಿ-1 (ಅಕೌಂಟ್ ನಂ.05240100000562 ಎಂದು ಬರೆದು ಮತ್ತು ರೂ. 16,750/- ಎಂದು ಬರೆದು ಅದರ ಮೇಲೆ ಪಂಚಾಯತ್

ಅಭಿವೃದ್ಧಿ ಅಧಿಕಾರಿ ಹಾಗೂ ಅಧ್ಯಕ್ಷರು ಸಹಿ ಮಾಡಿದ್ದು, ದಿ: 18/02/2011 ಎಂದು ನಮೂದಿಸಲಾಗಿರುತ್ತದೆ), ಬ್ಯಾಂಕ್ ಆಫ್ ಬರೋಡದ ಜೆರಾಕ್ಸ್ ಚೆಕ್‌ನ ಪ್ರತಿ–1 (ಅಕೌಂಟ್ ನಂ.05240100000562 ಎಂದು ಬರೆದು ಮತ್ತು ರೂ.84,375/– ಎಂದು ಬರೆದು ರೌಂಡ್ ಮಾಡಿ, ತಿದ್ದುಪಡಿಮಾಡಿ, ನಂತರ ರೂ. 67,625/– ಎಂದು ಬರೆದು ಅದರ ಮೇಲೆ ಪಂಚಾಯತ್ ಅಭಿವೃದ್ಧಿ ಅಧಿಕಾರಿ ಹಾಗೂ ಅಧ್ಯಕ್ಷರು ಸಹಿ ಮಾಡಿದ್ದು, ದಿ: 16/02/2011 ಎಂದು ನಮೂದಿಸಲಾಗಿರುತ್ತದೆ), ಎನ್.ಎಂ.ಆರ್. ನಂ.2585, ಪಾರ್ಟ್–3, ಕೆಲಸಕ್ಕಾಗಿ ಅರ್ಜಿ ಸಲ್ಲಿಸಿದ ನಮೂನೆ 6ರ ಫಾರಂಗಳು–2, ಕಾರ್ಯನಿರ್ವಾಹಕ ಅಧಿಕಾರಿಗಳು, ತಾಲ್ಲೂಕು ಪಂಚಾಯಿತಿ, ಚಿಕ್ಕೋಡಿರವರು ದಿ: 02/02/20 (ಎಂದು ಇದ್ದು ಮುಂದಿನ ಇಸವಿ ಮೂಡಿರುವುದಿಲ್ಲ) ರಂದು ನೀಡಿದ ಕಾಮಗಾರಿ ಪ್ರಾರಂಭ ಪತ್ರ, ಸಹಾಯಕ ಕಾರ್ಯಕಾರಿ ಅಭಿಯಂತರರು, ಪಂಚಾಯತ್ ರಾಜ್ ಇಂಜಿನಿಯರಿಂಗ್ ಉಪವಿಭಾಗ, ಚಿಕ್ಕೋಡಿರವರು ಕಾಮಗಾರಿಗೆ ನೀಡಿದ ತಾಂತ್ರಿಕ ಮಂಜೂರಾತಿ ಆದೇಶ, ಕಾಮಗಾರಿಯ ಅಂದಾಜು ಪತ್ರಿಕೆ ಮತ್ತು ಕಾಮಗಾರಿಯ 2 ಫೋಟೋ ಮತ್ತು 2 ಅಳತೆ ಪುಸ್ತಕಗಳು, ಅಳತೆ ಪುಸ್ತಕ ಸಂ: 1 ಎಂದು ಕೈನಿಂದ ಬರೆಯಲಾಗಿದೆ (ಹೆಚ್ಚುವರಿ ಕಾಮಗಾರಿ ಎಂದು ಕೈನಿಂದ ಬರೆದಿದ್ದು), ಇನ್ನೊಂದು ಅಳತೆ ಪುಸ್ತಕ ಅಳತೆ ಪುಸ್ತಕ ಸಂ:548:–, ಸದರಿ ಎಂ.ಬಿ. ಪುಸ್ತಕಗಳನ್ನು ಲೆಕ್ಕ ಅಧೀಕ್ಷಕರು, ತಾಲ್ಲೂಕು ಪಂಚಾಯಿತಿ, ಚಿಕ್ಕೋಡಿ ಮತ್ತು ಕಾರ್ಯನಿರ್ವಾಹಕ ಅಧಿಕಾರಿಗಳು, ತಾಲ್ಲೂಕು ಪಂಚಾಯಿತಿ ಚಿಕ್ಕೋಡಿರವರಿಂದ ಪಡೆದುಕೊಂಡ ಬಗ್ಗೆ ಆಗಲೀ, ಪ್ರಮಾಣೀಕರಿಸಿದ ಬಗ್ಗೆ ಆಗಲೀ, ವಿತರಿಸಿದ ದಿನಾಂಕದ ಬಗ್ಗೆ ಆಗಲೀ ಯಾವುದೇ ಅಧಿಕಾರಿಯ ಸಹಿ ಇರುವುದಿಲ್ಲ. ಅಳತೆ ಪುಸ್ತಕ–1 103 ಹಾಳೆಗಳನ್ನು ಹೊಂದಿರುತ್ತದೆ. ಅದರಲ್ಲಿ ಪುಟ ಸಂಖ್ಯೆ 1 ರಿಂದ 94 ರವರೆಗೆ ಬರೆದಿರುತ್ತಾರೆ. (ಪುಟ ಸಂಖ್ಯೆ 72 ರಿಂದ 74, 76 ರಿಂದ 80) ಅಳತೆ ಪುಸ್ತಕ ಸಂ:548:– ಇದು 104 ಹಾಳೆಗಳನ್ನು ಹೊಂದಿರುತ್ತದೆ. ಅದರಲ್ಲಿ ಪುಟ ಸಂಖ್ಯೆ 1 ರಿಂದ 40 ರವರೆಗೆ ಬರೆದಿದ್ದು, ಅದರಲ್ಲಿ ಕಾಮಗಾರಿಯ ಬಗ್ಗೆ ಪುಟ ಸಂಖ್ಯೆ 37ರಲ್ಲಿ ನಮೂದಿಸಲಾಗಿದೆ.

(4) ಬೇಡಕಿಹಾಳಗ್ರಾಮದಲ್ಲಿ ಗ್ರಾಮ ಪಂಚಾಯಿತಿ ವತಿಯಿಂದ 2010-11ನೇ ಸಾಲಿನಲ್ಲಿ ಗಣಪತಿ ದೇವಸ್ಥಾನದಿಂದ ಬೇಡಕಿಹಾಳ ಗ್ರಾಮದ ಹಳ್ಳದವರೆಗೆ ಕಾಲುವೆ ನಿರ್ಮಿಸಿ, ಮುಖ್ಯ ಚರಂಡಿಗೆ ಜೋಡಿಸುವ ಕಾಮಗಾರಿಯ ಕಡತ ಅಂದಾಜು ಮೊತ್ತ ರೂ. 1,00,000/-.

ಸದರಿ ಕಡತದಲ್ಲಿ ಒಟ್ಟು 33 ಹಾಳೆಗಳಿದ್ದು, ಮಸ್ಟರ್ ರೋಲ್ ರಿಪೋರ್ಟ್, ಪಾರ್ಟ್-3, ಎನ್.ಎಂ.ಆರ್. ಸಂಖ್ಯೆ-9, ಕೆಲಸಕ್ಕಾಗಿ ಅರ್ಜಿ ಸಲ್ಲಿಸಿದ ನಮೂನೆ-6ರ ಫಾರಂ-1, ಕಾಮಗಾರಿಗಳ ತಪಾಸಣಾ ವರದಿ (3 ಹಾಳೆಗಳು ಶ್ರಿ. ಬಿ.ಎಂ. ನಾರಾಯಣಕರ, ವಲಯ ಅರಣ್ಯ ಅಧಿಕಾರಿಗಳು, ಹುಕ್ಕೇರಿ ವಲಯರವರು ನೀಡಿದ್ದು), ಫಾರಂ ನಂ.24ರಲ್ಲಿ ಫಸ್ಟ್ ಮತ್ತು ಫೈನಲ್ ಬಿಲ್ ಸರ್ಟಿಫಿಕೇಟ್‌ಗಳು-3, ಗ್ರಾಮ ಪಂಚಾಯಿತಿ ಬೇಡಕಿಹಾಳದಿಂದ ಪೋಸ್ಟ್ ಮಾಸ್ಟರ್ ಬೇಡಕಿ ಹಾಳರವರಿಗೆ ಟೈಪ್ ಮಾಡಿ ನೀಡಿದ ಬ್ಯಾಂಕ್ ಅಡ್ವೈಸ್-1 (ಜೆರಾಕ್ಸ್ ಪ್ರತಿ), ಎನ್.ಎಂ.ಆರ್. ನಂ.2765, ಪಾರ್ಟ್-3, ಕೆಲಸಕ್ಕಾಗಿ ಅರ್ಜಿ ಸಲ್ಲಿಸಿದ ನಮೂನೆ 6ರ ಫಾರಂ - 1, ಕಾರ್ಯನಿರ್ವಾಹಕ ಅಧಿಕಾರಿಗಳು, ತಾಲ್ಲೂಕು ಪಂಚಾಯಿತಿ, ಚಿಕ್ಕೋಡಿರವರು ದಿ: 19/03/2011 ರಂದು ನೀಡಿದ ಕಾಮಗಾರಿ ಪ್ರಾರಂಭ ಪತ್ರ, ಸಹಾಯಕ ಕಾರ್ಯಕಾರಿ ಅಭಿಯಂತರರು, ಪಂಚಾಯತ್ ರಾಜ್ ಇಂಜಿನಿಯರಿಂಗ್ ಉಪವಿಭಾಗ, ಚಿಕ್ಕೋಡಿರವರು ಕಾಮಗಾರಿಗೆ ನೀಡಿದ ತಾಂತ್ರಿಕ ಮಂಜೂರಾತಿ ಆದೇಶ, ಕಾಮಗಾರಿಯ ಅಂದಾಜು ಪತ್ರಿಕೆ ಮತ್ತು ಕಾಮಗಾರಿಯ 3 ಫೋಟೋಗಳು ಮತ್ತು ಅಳತೆ ಪುಸ್ತಕ ಸಂ: 1670 ಒಟ್ಟು 100 ಹಾಳೆಗಳಿದ್ದು, ಅದರಲ್ಲಿ ಪುಟ ಸಂಖ್ಯೆ 1 ರಿಂದ 34 ರವರೆಗೆ ಬರೆದಿದ್ದು, ಕಾಮಗಾರಿಯ ಬಗ್ಗೆ ಪುಟ ಸಂಖ್ಯೆ 9 ರಿಂದ 11 ರವರೆಗೆ ಮತ್ತು ಪುಟ ಸಂಖ್ಯೆ 22 ರಿಂದ 25ರಲ್ಲಿ ನಮೂದಿಸಲಾಗಿದೆ.

(5) 2010-11ನೇ ಸಾಲಿನ ಕ್ರಿಯಾ ಯೋಜನೆ:-

ಮುಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯ 2010-11ನೇ ಸಾಲಿನ ಕ್ರಿಯಾ ಯೋಜನೆ ಬಗ್ಗೆ ನಮೂದು ಇರುವ ಹಾಳೆಗಳನ್ನು ಹಾಜರು ಪಡಿಸಿದ್ದು, ಅವು ಒಟ್ಟು

10 ಹಾಳೆಗಳಿದ್ದು, ಅವುಗಳಲ್ಲಿ (1) 5ನೇ ಹಾಳೆಯ 7ನೇ ಮುಖ್ಯ ಕ್ರಮ ಸಂಖ್ಯೆಯ, 16ನೇ ಕ್ರಮ ಸಂಖ್ಯೆಯಲ್ಲಿ ಬೇಡಕಿಹಾಳಗ್ರಾಮದ ನೀರು ನಿಂತ ಪ್ರದೇಶವಾದ ಗಣಪತಿ ದೇವಸ್ಥಾನದಿಂದ ಬೇಡಕಿಹಾಳಗ್ರಾಮದ ಹಳ್ಳದವರೆಗೆ ಕಾಲುವೆ ನಿರ್ಮಿಸಿ, ಮುಖ್ಯ ಚರಂಡಿಗೆ ಜೋಡಿಸುವ ಕಾಮಗಾರಿಯ ಬಗ್ಗೆ, (2) 9ನೇ ಹಾಳೆಯ, 8ನೇ ಮುಖ್ಯ ಕ್ರಮ ಸಂಖ್ಯೆಯ 10ನೇ ಕ್ರಮ ಸಂಖ್ಯೆಯಲ್ಲಿ ಬೇಡಕಿಹಾಳಗ್ರಾಮದ ಶ್ರೀ ದೇಸಾಯಿಯವರ ಪ್ಲಾಟ್‌ನಿಂದ ಶ್ರೀ ಎಸ್.ಎಸ್. ಪಾಟೀಲರವರ ಪ್ಲಾಟ್‌ನಲ್ಲಿನ ರಸ್ತೆ ಖಡೀಕರಣ ಮಾಡುವ ಕಾಮಗಾರಿಯ ಬಗ್ಗೆ, (3) 9ನೇ ಹಾಳೆಯ 8ನೇ ಮುಖ್ಯ ಕ್ರಮ ಸಂಖ್ಯೆಯ 12ನೇ ಕ್ರಮ ಸಂಖ್ಯೆಯಲ್ಲಿ ಬೇಡಕಿಹಾಳಗ್ರಾಮದ ಗಳತಗಾ ರಸ್ತೆಯಿಂದ ಶ್ರೀಪತಿ ಪಾಟೀಲರವರ ಬಾವಿಯವರೆಗೆ ರಸ್ತೆಗೆ ಖಡೀಕರಣ ಮಾಡುವ ಕಾಮಗಾರಿ ಬಗ್ಗೆ ಮತ್ತು (4) 10ನೇ ಹಾಳೆಯ 8ನೇ ಮುಖ್ಯ ಕ್ರಮ ಸಂಖ್ಯೆಯ 17ನೇ ಕ್ರಮ ಸಂಖ್ಯೆಯಲ್ಲಿ ಬೇಡಕಿಹಾಳ ಗ್ರಾಮದ ಶ್ರೀ. ಶಾಸ್ತ್ರೀ ಬೆಲೆ ಪ್ಲಾಟ್‌ನಲ್ಲಿನ ನಾಲ್ಕು ರಸ್ತೆಗಳಿಗೆ ಖಡೀಕರಣ ಕಾಮಗಾರಿಯ ಬಗ್ಗೆ ನಮೂದಿಸಲಾಗಿದೆ.

(6) ಪಂಚಾಯಿತಿ ನಡವಳಿಕೆ ಪುಸ್ತಕ (ಪ್ರೊಸೀಡಿಂಗ್ಸ್ ಪುಸ್ತಕ):-
ಸದರಿ ಪುಸ್ತಕವು ಒಟ್ಟು 94 ಹಾಳೆಗಳಿಂದ ಕೂಡಿರುತ್ತದೆ. ಸದರಿ ಪುಸ್ತಕವನ್ನು ದಿ: 18/06/2010ರಿಂದ ಪ್ರಾರಂಭಿಸಿದ್ದು, ದಿ: 26/04/2012ರವರೆಗೆ ಬರೆಯಲಾಗಿರುತ್ತದೆ. ಸದರಿ ಪುಸ್ತಕದಲ್ಲಿ ಒಟ್ಟು 1 ರಿಂದ 44ನೇ ಹಾಳೆಯವರೆಗೆ ಉಪಯೋಗಿಸಿದ್ದು, ಈ ಪುಸ್ತಕದಲ್ಲಿ (1) ಶ್ರೀ ದೇಸಾಯಿಯವರ ಪ್ಲಾಟ್‌ನಿಂದ ಶ್ರೀ ಎಸ್.ಎಸ್. ಪಾಟೀಲರವರ ಪ್ಲಾಟ್‌ನಲ್ಲಿನ ರಸ್ತೆ ಖಡೀಕರಣ ಮಾಡುವ ಕಾಮಗಾರಿಯ ಬಗ್ಗೆ, (2) ಶ್ರೀ ಶಾಸ್ತ್ರೀ ಬೆಲೆ ಪ್ಲಾಟ್‌ನಲ್ಲಿನ ನಾಲ್ಕು ರಸ್ತೆಗಳಿಗೆ ಖಡೀಕರಣ ಕಾಮಗಾರಿಯ ಕಡತ, ನಿರ್ಮಾಣದ ಬಗ್ಗೆ, (3) ಗಳತಗಾ ರಸ್ತೆಯಿಂದ ಶ್ರೀಪತಿ ಪಾಟೀಲರವರ ಬಾವಿಯವರೆಗೆ ರಸ್ತೆಗೆ ಖಡೀಕರಣ ಮಾಡುವ ಕಾಮಗಾರಿಯ ಬಗ್ಗೆ ಹಾಗೂ (4) ಬೇಡಕಿಹಾಳಗ್ರಾಮದ ನೀರು ನಿಂತ ಪ್ರದೇಶವಾದ ಗಣಪತಿ ದೇವಸ್ಥಾನದಿಂದ ಬೇಡಕಿಹಾಳಗ್ರಾಮದ ಹಳ್ಳದವರೆಗೆ ಕಾಲುವೆ ನಿರ್ಮಿಸಿ, ಮುಖ್ಯ ಚರಂಡಿಗೆ ಜೋಡಿಸುವ ಕಾಮಗಾರಿ, ಸದರಿ ನಾಲ್ಕು ಕಾಮಗಾರಿಗಳನ್ನು ಕೈಗೊಳ್ಳುವ ಬಗ್ಗೆ ಗ್ರಾಮ

ಪಂಚಾಯಿತಿಯ ಸಾಮಾನ್ಯ ಸಭೆಯಲ್ಲಿ ಅನುಮೋದನೆ ಪಡೆದಿರುವ ಬಗ್ಗೆ ನಮೂದಿಸಲಾಗಿದೆ.

(7) ಗ್ರಾಮ ಸಭೆ ನಡವಳಿಕೆ ಪುಸ್ತಕ:-
ಸದರಿ ಪುಸ್ತಕವು ಒಟ್ಟು 116 ಪುಟಗಳಿಂದ ಕೂಡಿರುತ್ತದೆ. ಸದರಿ ಪುಸ್ತಕವನ್ನು ದಿ: 06/07/2010 ರಿಂದ ಪ್ರಾರಂಭಿಸಿದ್ದು, ದಿ: 10/02/2012 ರವರೆಗೆ ಬರೆಯಲಾಗಿರುತ್ತದೆ. ಸದರಿ ಪುಸ್ತಕದಲ್ಲಿ ಒಟ್ಟು 01 ರಿಂದ 98ನೇ ಪುಟಗಳವರೆಗೆ ಉಪಯೋಗಿಸಿದ್ದು ಇರುತ್ತದೆ. ಸದರಿ ಪುಸ್ತಕದಲ್ಲಿ ದಿ: 06/07/2010 (ಪುಟ ಸಂ.12) ರಂದು ಜರುಗಿಸಿದ ಸಭೆಯಲ್ಲಿ ವಿಷಯ ನಂ.7 ರಡಿಯಲ್ಲಿ ಸದರಿ ಕಾಮಗಾರಿಗಳನ್ನು ಕೈಗೊಳ್ಳುವ ಬಗ್ಗೆ ನಮೂದಿಸಲಾಗಿದೆ.

(8) ಕ್ಯಾಷ್ ಪುಸ್ತಕಗಳು ಒಟ್ಟು-2:-
(ಅ) ಕ್ಯಾಷ್ ಪುಸ್ತಕ:- ಇದು ಒಟ್ಟು 45 ಹಾಳೆಗಳನ್ನು ಹೊಂದಿದ್ದು, ಇದರಲ್ಲಿ ದಿ: 21/04/2007 ರಿಂದ 31/03/2011 ರವರೆಗೆ ಬರೆಯಲಾಗಿದ್ದು (2ನೇ ಪುಟದಿಂದ 42ನೇ ಪುಟದವರೆಗೆ) ಇದರಲ್ಲಿ (1) ಪುಟ ಸಂ.33ರಿಂದ 35ರವರೆಗೆ ಹಾಗೂ ಪುಟ ಸಂ.38 & 40 ರಲ್ಲಿ ಬೇಡಕಿಹಾಳಗ್ರಾಮದ ಗಳತಗಾ ರಸ್ತೆಯಿಂದ ಶ್ರೀಪತಿ ಪಾಟೀಲರ ಬಾವಿಯವರೆಗೆ ರಸ್ತೆಗೆ ಖಡೀಕರಣ ಮಾಡುವ ಕಾಮಗಾರಿಗೆ ಮಾಡಲಾದ ಖರ್ಚು ವೆಚ್ಚಗಳ ಬಗ್ಗೆ ನಮೂದಿಸಲಾಗಿದೆ. (2) ಪುಟ ಸಂ.38, 40, 41 ರಲ್ಲಿ ಬೇಡಕಿಹಾಳಗ್ರಾಮದ ಶ್ರೀ. ಶಾಸ್ತ್ರೀ ಬೆಲೆ ಪ್ಲಾಟ್‌ನಲ್ಲಿನ ನಾಲ್ಕು ರಸ್ತೆಗಳಿಗೆ ಖಡೀಕರಣ ಕಾಮಗಾರಿಗೆ ಮಾಡಲಾದ ಖರ್ಚು ವೆಚ್ಚಗಳ ಬಗ್ಗೆ ನಮೂದಿಸಲಾಗಿದೆ. (3) ಪುಟ ಸಂ.39 & 41 ರಲ್ಲಿ ಬೇಡಕಿಹಾಳಗ್ರಾಮದ ಶ್ರೀ. ದೇಸಾಯಿಯವರ ಪ್ಲಾಟ್‌ನಿಂದ ಶ್ರೀ. ಎಸ್.ಎಸ್. ಪಾಟೀಲರವರ ಪ್ಲಾಟ್‌ನಲ್ಲಿನ ರಸ್ತೆ ಖಡೀಕರಣ ಮಾಡುವ ಕಾಮಗಾರಿಗೆ ಮಾಡಲಾದ ಖರ್ಚು ವೆಚ್ಚಗಳ ಬಗ್ಗೆ ನಮೂದಿಸಲಾಗಿದೆ.

(ಬ) ಕ್ಯಾಷ್ ಪುಸ್ತಕ:- ಇದು ಒಟ್ಟು 46 ಹಾಳೆಗಳನ್ನು ಹೊಂದಿದ್ದು, ಇದರಲ್ಲಿ ದಿ: 01/04/2011ರಿಂದ 29/02/2012ರವರೆಗೆ

ಬರೆಯಲಾಗಿದ್ದು (2ನೇ ಪುಟದಿಂದ 16ನೇ ಪುಟದವರೆಗೆ) ಇದರಲ್ಲಿ ಪುಟ ಸಂ: 3 & 7 ರಲ್ಲಿ ಬೇಡಕಿಹಾಳಗ್ರಾಮದ ನೀರು ನಿಂತ ಪ್ರದೇಶವಾದ ಗಣಪತಿ ದೇವಸ್ಥಾನದಿಂದ ಬೇಡಕಿಹಾಳಗ್ರಾಮದ ಹಳ್ಳದವರೆಗೆ ಕಾಲುವೆ ನಿರ್ಮಿಸಿ, ಮುಖ್ಯ ಚರಂಡಿಗೆ ಜೋಡಿಸುವ ಕಾಮಗಾರಿಗೆ ಮಾಡಲಾದ ಖರ್ಚು ವೆಚ್ಚಗಳ ಬಗ್ಗೆ ನಮೂದಿಸಲಾಗಿದೆ.

(9) ಬೇಡಕಿಹಾಳಗ್ರಾಮ ಪಂಚಾಯಿತಿ ಸದಸ್ಯರ ಪಟ್ಟಿ:-
ಮೇಲ್ಕಂಡ ಎಲ್ಲಾ ದಾಖಲಾತಿಗಳನ್ನು ತನಿಖಾಧಿಕಾರಿಯವರು, ಪಂಚಸಾಕ್ಷಿಗಳು ಮತ್ತು ದೂರುದಾರರ ಸಮಕ್ಷಮ ವಶಕ್ಕೆ ಪಡೆದುಕೊಂಡಿರುತ್ತಾರೆ. ಈ ಬಗ್ಗೆ ವಿವರವಾದ ಪಂಚನಾಮೆಯನ್ನು ನಿರ್ವಹಿಸಿರುತ್ತಾರೆ.

iii) ದಿನಾಂಕ 27/04/2012ರಂದು ತನಿಖಾಧಿಕಾರಿಯವರು, ಪಂಚಸಾಕ್ಷಿದಾರರ, ದೂರುದಾರರ ಮತ್ತು ಕಾರ್ಯ ನಿರ್ವಾಹಕ ಅಧಿಕಾರಿಗಳ ಹಾಗೂ ಕಾರ್ಯದರ್ಶಿಗಳ ಜೊತೆಗೆ ಬೇಡಕಿಹಾಳಗ್ರಾಮದಲ್ಲಿ ಕೈಗೊಂಡ ಕಾಮಗಾರಿಗಳ ಸ್ಥಳಗಳಿಗೆ ಭೇಟಿ ನೀಡಿ, (1) ಬೇಡಕಿಹಾಳಗ್ರಾಮದ ನೀರು ನಿಂತ ಪ್ರದೇಶವಾದ ಗಣಪತಿ ದೇವಸ್ಥಾನದಿಂದ ಬೇಡಕಿಹಾಳಗ್ರಾಮದ ಹಳ್ಳದವರೆಗೆ ಕಾಲುವೆ ನಿರ್ಮಿಸಿ, ಮುಖ್ಯ ಚರಂಡಿಗೆ ಜೋಡಿಸುವ ಕಾಮಗಾರಿಯನ್ನು ಕೈಗೊಂಡ ಸ್ಥಳಕ್ಕೆ ಮಧ್ಯಾಹ್ನ 3.20 ಗಂಟೆಗೆ ಭೇಟಿನೀಡಿ (ನಾಲ್ಕನೇ) ಕಾಮಗಾರಿಯನ್ನು ಪಂಚಸಾಕ್ಷಿದಾರರ ಸಮಕ್ಷಮ ಪರಿಶೀಲಿಸಲಾಗಿ, ಸದರಿ ಕಾಲುವೆ ಕಲ್ಲಿನಿಂದ ಕಟ್ಟಿ ಸಿಮೆಂಟ್ ಮಡ್ಡಿ ಮಾಡಿದ ಕಾಲುವೆಯಾಗಿರುತ್ತದೆ. ಸದರಿ ಕಾಮಗಾರಿಯನ್ನು ಕೈಗೊಳ್ಳಲು ತಯಾರಿಸಲಾದ ಅಂದಾಜು ಪಟ್ಟಿಯಲ್ಲಿ ತೋರಿಸಿದಷ್ಟು ಉದ್ದದ ಕಾಲುವೆಯನ್ನು ನಿರ್ಮಿಸಿರುವುದು ಕಂಡುಬಂದಿರುವುದಿಲ್ಲವೆಂದು ತನಿಖಾಧಿಕಾರಿಯವರು ಎಲ್ಲರ ಸಮಕ್ಷಮ ಪರಿಶೀಲಿಸಿರುತ್ತಾರೆ. ನಂತರ ತನಿಖಾಧಿಕಾರಿಯವರು, ಪಂಚರ, ದೂರುದಾರರ ಮತ್ತು ಕಾರ್ಯ ನಿರ್ವಾಹಕ ಅಧಿಕಾರಿಗಳ ಹಾಗೂ ಕಾರ್ಯದರ್ಶಿಗಳ ಜೊತೆಗೆ (2) ಬೇಡಕಿಹಾಳಗ್ರಾಮದಲ್ಲಿ ಗಳತಗಾ ರಸ್ತೆಯಿಂದ ಶ್ರೀಪತಿ ಪಾಟೀಲರ ಬಾವಿಯವರೆಗೆ ರಸ್ತೆಗೆ ಖಡೀಕರಣ ಮಾಡುವ ಕಾಮಗಾರಿಯನ್ನು ಕೈಗೊಂಡ ಸ್ಥಳಕ್ಕೆ ಮಧ್ಯಾಹ್ನ 3.45 ಗಂಟೆಗೆ ಭೇಟಿ ನೀಡಿ (ಮೂರನೇ) ಕಾಮಗಾರಿಯನ್ನು ಪರಿಶೀಲಿಸಿ ನೋಡಲಾಗಿ ರಸ್ತೆಯ ಮೇಲೆ

ಬೇಡಕಿಹಾಳಗ್ರಾಮ ರಸ್ತೆ ಯೋಜನೆ ಅಡಿ ಹೊಸದಾಗಿ ಕಾಮಗಾರಿಯನ್ನು ಪ್ರಾರಂಭಿಸಿದ್ದು, ರಸ್ತೆ ಡಾಂಬರೀಕರಣ ಕೆಲಸ ಪ್ರಗತಿಯಲ್ಲಿರುವುದು ಕಂಡುಬಂದಿರುವುದಾಗಿ ತನಿಖಾಧಿಕಾರಿಯವರು ಎಲ್ಲರ ಸಮಕ್ಷಮ ಪರಿಶೀಲಿಸಿರುತ್ತಾರೆ. ನಂತರ ತನಿಖಾಧಿಕಾರಿಯವರು, ಪಂಚರ, ದೂರುದಾರರ ಮತ್ತು ಕಾರ್ಯ ನಿರ್ವಾಹಕ ಅಧಿಕಾರಿಗಳ ಹಾಗೂ ಕಾರ್ಯದರ್ಶಿಗಳ ಜೊತೆಗೆ (3) ಬೇಡಕಿಹಾಳಗ್ರಾಮದಲ್ಲಿ ಶ್ರೀ. ದೇಸಾಯಿಯವರ ಪ್ಲಾಟ್‌ನಿಂದ ಶ್ರೀ. ಎಸ್.ಎಸ್. ಪಾಟೀಲರವರ ಪ್ಲಾಟ್‌ವರೆಗಿನ ರಸ್ತೆ ಖಡೀಕರಣ ಮಾಡುವ (ಒಂದನೇ) ಕಾಮಗಾರಿಯನ್ನು ಕೈಗೊಂಡ ಸ್ಥಳಕ್ಕೆ ಸಂಜೆ 4.30 ಗಂಟೆಗೆ ಭೇಟಿ ನೀಡಿ ಕಾಮಗಾರಿಯನ್ನು ಪರಿಶೀಲಿಸಲಾಗಿ ಮುರಮ್ ಫಾರ್ಮೇಷನ್‌ದಿಂದ ಮಾಡಿದ ರಸ್ತೆ ಇದ್ದು, ಸದರಿ ರಸ್ತೆಯ ಅಕ್ಕಪಕ್ಕದ ಮನೆಯವರಾದ ಶ್ರೀ. ಜ್ಞಾನದೇವ್ ಬಾಬುರಾವ್ ದೇಸಾಯಿ ಮತ್ತು ಶ್ರೀ. ಅನಿಲ್ ರಾವ ಸಾಹೇಬ್ ದೇಸಾಯಿರವರನ್ನು ಪಂಚರ ಮತ್ತು ದೂರುದಾರರ ಸಮಕ್ಷಮ ವಿಚಾರಿಸಲಾಗಿ, ಅವರು ಒಂದೂವರೆ ವರ್ಷಗಳ ಹಿಂದೆ ರಸ್ತೆ ಮಾಡಿರುವುದಾಗಿ ತಿಳಿಸಿರುತ್ತಾರೆ. ನಂತರ ತನಿಖಾಧಿಕಾರಿಯವರು ಪಂಚರ, ದೂರುದಾರರ ಮತ್ತು ಕಾರ್ಯ ನಿರ್ವಾಹಕ ಅಧಿಕಾರಿಗಳ ಹಾಗೂ ಕಾರ್ಯದರ್ಶಿಗಳ ಜೊತೆಗೆ (4) ಬೇಡಕಿಹಾಳಗ್ರಾಮದಲ್ಲಿ ಶ್ರೀ. ಶಾಸ್ತ್ರೀ ಬೆಲೆ ಪ್ಲಾಟ್‌ದಲ್ಲಿನ ನಾಲ್ಕು ರಸ್ತೆಗಳಿಗೆ ಖಡೀಕರಣ (ಎರಡನೇ) ಕಾಮಗಾರಿಯನ್ನು ಕೈಗೊಂಡ ಸ್ಥಳಕ್ಕೆ ಸಂಜೆ 5.15 ಗಂಟೆಗೆ ಭೇಟಿ ನೀಡಿ ಕಾಮಗಾರಿಯನ್ನು ಪರಿಶೀಲಿಸಲಾಗಿ, ಮುರಮ್ ಫಾರ್ಮೇಷನ್‌ದಿಂದ ಮಾಡಿದ ರಸ್ತೆ ಇದ್ದು, ಸದರಿ ರಸ್ತೆಯ ಅಕ್ಕಪಕ್ಕದ ಮನೆಯವರಾದ ಶ್ರೀ. ರಘುನಾಥ್ ದಾದೋಬಾ ಸುತಾರ, ಶ್ರೀ. ತಾತ್ಯಾ ಸಾಹೇಬ ಅಪ್ಪಣ್ಣ ಸುಬೇದಾರ, ಶ್ರೀ. ಬಾಷೇಸಾಬ ಹಾಸಿಂಸಾಬ ಲಕ್ಷ್ಮೇಶ್ವರ ಮತ್ತು ಇತರರನ್ನು ಎಲ್ಲರ ಸಮಕ್ಷಮ ವಿಚಾರಿಸಲಾಗಿ ಅವರು ಒಂದೂವರೆ ವರ್ಷಗಳ ಹಿಂದೆ ರಸ್ತೆ ಮಾಡಿರುವುದಾಗಿ ತಿಳಿಸಿರುತ್ತಾರೆ. ಸ್ಥಳಗಳಿಗೆ ಭೇಟಿನೀಡಿದ ಬಗ್ಗೆ ತನಿಖಾಧಿಕಾರಿಯವರು ಫೋಟೋಗಳನ್ನು ತೆಗೆಸಿರುತ್ತಾರೆ. ಅಲ್ಲಿಂದ ಬೇಡಕಿಹಾಳಗ್ರಾಮ ಪಂಚಾಯಿತಿ ಕಾರ್ಯಾಲಯಕ್ಕೆ ವಾಪಸ್ಸು ಬಂದು ಕಾಮಗಾರಿಗಳ ಸ್ಥಳಗಳಿಗೆ ಭೇಟಿ ನೀಡಿದ ಬಗ್ಗೆ ವಿವರವಾದ ಪಂಚನಾಮೆಯನ್ನು ಜರುಗಿಸಿರುತ್ತಾರೆ.

ತದನಂತರ, ತನಿಖಾಧಿಕಾರಿಯವರು ಹಂತ ಹಂತವಾಗಿ ಬೇಡಕಿಹಾಳಗ್ರಾಮದ ಮಹಾತ್ಮಾಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯಡಿ ಕೈಗೊಂಡ ಕಾಮಗಾರಿಗಳಲ್ಲಿ ಕೆಲಸ ನಿರ್ವಹಿಸಿದ ಬಗ್ಗೆ ಎನ್.ಎಂ.ಆರ್. ಬರೆದು ಅಕುಶಲ ಕೂಲಿಕಾರರ ಖೊಟ್ಟಿ ಸಹಿ ಮಾಡಿರುವರೆಂದು

ಸಂಶಯವಿರುವ ಗಳತಗಾ ಗ್ರಾಮ ಪಂಚಾಯಿತಿಯಲ್ಲಿ ಕೆಲಸ ನಿರ್ವಹಿಸುತ್ತಿರುವ ವ್ಯಕ್ತಿಗಳ ಮಾದರಿ ಕೈಬರಹ, ಹೆಬ್ಬೆಟ್ಟಿನ ಗುರುತುಗಳನ್ನು ಮತ್ತು ಸಹಿಗಳನ್ನು ಹಾಗೂ ಕಾಮಗಾರಿಗಳ ಕಡತಗಳಲ್ಲಿನ ಮಸ್ಟರ್ ರೋಲ್‌ಗಳಲ್ಲಿ ಅಕುಶಲ ಕೂಲಿಕಾರರು ಎಂದು ನಮೂದಿಸಿದ ಅಕುಶಲ ಕೂಲಿಕಾರರ ಸಹಿಗಳನ್ನು / ಕೈಬೆರಳುಗಳ ಮುದ್ರೆಗಳನ್ನು ಮಸ್ಟರ್ ರೋಲ್‌ಗಳಲ್ಲಿದ್ದ ಸಹಿಗಳಿಗೆ ಹೋಲಿಕೆ ಮಾಡಬೇಕಾಗಿರುವುದರಿಂದ 3ನೇ ಮತ್ತು 4ನೇ ಎದುರುದಾರರ ಹಾಗೂ ಶ್ರೀ. ಶಿವಪ್ರಸಾದ್ ಶೆಟ್ಟಪ್ಪ ಶೆಟ್ಟಿ ಮತ್ತು ಶ್ರೀ. ಮಾರುತಿ ಸಿದ್ದಪ್ಪ ಸುತಾರ ಹಾಗೂ ಇತರೆ ಸಾಕ್ಷಿಗಳ ಸ್ಯಾಂಪಲ್ ಸಹಿಗಳನ್ನು, ಕೈಬೆರಳುಗಳ ಮುದ್ರೆಗಳನ್ನು ತನಿಖಾಧಿಕಾರಿಯವರು ಪಡೆದುಕೊಂಡಿರುತ್ತಾರೆ.

ದಿನಾಂಕ 27/12/2012 ರಂದು ಶ್ರೀ. ಎಂ. ದೇವಿಪ್ರಸಾದ್, ಸಹಾಯಕ ಕಾರ್ಯಪಾಲಕ ಇಂಜಿನಿಯರ್-2, ತಾಂತ್ರಿಕ ವಿಭಾಗ, ಕರ್ನಾಟಕ ಲೋಕಾಯುಕ್ತ, ಬೆಂಗಳೂರು ಇವರು ಖುದ್ದಾಗಿ ಬೇಡಕಿಹಾಳಗ್ರಾಮಕ್ಕೆ ಭೇಟಿ ನೀಡಿ, ಬೇಡಕಿಹಾಳಗ್ರಾಮ ಪಂಚಾಯಿತಿ ವತಿಯಿಂದ 2010-11ನೇ ಸಾಲಿನಲ್ಲಿ ಕೈಗೊಂಡಿರುವ ನಾಲ್ಕು ಕಾಮಗಾರಿಗಳಿಗೆ ಸಂಬಂಧಿಸಿದಂತೆ ಸ್ಥಳ ಪರಿಶೀಲನೆ ಮಾಡಿ ತನಿಖಾ ವರದಿಯನ್ನು ಮುಖ್ಯ ಅಭಿಯಂತರರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರುರವರ ಮುಖಾಂತರ ದಿ: 01/02/2013 ರಂದು ಸಲ್ಲಿಸಿರುತ್ತಾರೆ. ಸದರಿ ವರದಿಯಲ್ಲಿ ಪಿ.ಎಂ.ಜಿ.ಎಸ್.ವೈ. ಯೋಜನೆ ಅಡಿಯಲ್ಲಿ ಕೈಗೊಂಡ 3ನೇ ಕಾಮಗಾರಿ ಗಳತಗಾ ರಸ್ತೆಯಿಂದ ಶ್ರೀಪತಿ ಪಾಟೀಲರ ಬಾವಿಯವರೆಗೆ ರಸ್ತೆಗೆ ಖಡೀಕರಣ ಮಾಡುವ ಕಾಮಗಾರಿಗೆ ಸಂಬಂಧಿಸಿದಂತೆ ರಸ್ತೆಗೆ ಡಾಂಬರೀಕರಣವಾಗಿರುವುದು ಕಂಡುಬಂದಿರುತ್ತದೆಂದು ಮತ್ತು ಸ್ಥಳದಲ್ಲಿದ್ದ ಕಾಮಗಾರಿಯ ವಿವರವಿರುವ ಬೋರ್ಡ್‌ನ್ನು ಅವಲೋಕಿಸಿ, ಸದರಿ ರಸ್ತೆಯ ಅಭಿವೃದ್ಧಿಯನ್ನು ಪಿ.ಎಂ.ಜಿ.ಎಸ್.ವೈ. ಯೋಜನೆ ಅಡಿಯಲ್ಲಿ ಏಪ್ರಿಲ್ 2011ರಲ್ಲಿ ಕೈಗೊಂಡು 2.67 ಕಿಲೋಮೀಟರ್ ಉದ್ದದ ರಸ್ತೆಗೆ ಮುರ್ರಂ ಬೇಸ್, ಖಡೀಕರಣ ಹಾಗೂ ಡಾಂಬರೀಕರಣ ಮಾಡುವ ಮೂಲಕ ರಸ್ತೆ ಅಭಿವೃದ್ಧಿಪಡಿಸಿರುವುದು ಕಂಡುಬಂದಿದ್ದು, ಮಾರ್ಚ್ 2012ರಲ್ಲಿ ಪೂರ್ಣಗೊಳಿಸಲಾಗಿದೆ ಎಂದು ವರದಿಯಲ್ಲಿ ನಮೂದಿಸಿರುತ್ತಾರೆ.

2010-11ನೇ ಸಾಲಿನಲ್ಲಿ ಉದ್ಯೋಗ ಖಾತ್ರಿ ಯೋಜನೆಯಡಿ ನಿರ್ವಹಿಸಲಾಗಿದೆ ಎಂಬ ಕಾಮಗಾರಿಗಳಾದ (1) ಶ್ರೀ ದೇಸಾಯಿಯವರ

ಪ್ಲಾಟ್‌ನಿಂದ ಶ್ರೀ ಎಸ್.ಎಸ್. ಪಾಟೀಲರವರ ಪ್ಲಾಟ್‌ನಲ್ಲಿನ ರಸ್ತೆ ಖಡೀಕರಣ ಕಾಮಗಾರಿಗೆ ಸಂಬಂಧಿಸಿದಂತೆ ರೂ.33,165/-, (2) ಶ್ರೀ ಶಾಸ್ತ್ರೀ ಬೆಲೆ ಪ್ಲಾಟ್‌ನಲ್ಲಿನ ನಾಲ್ಕು ರಸ್ತೆಗಳಿಗೆ ಖಡೀಕರಣ ಕಾಮಗಾರಿಗೆ ಸಂಬಂಧಿಸಿದಂತೆ ರೂ.1,49,603/- ಹಾಗೂ (3) ಬೇಡಕಿಹಾಳಗ್ರಾಮದ ನೀರು ನಿಂತ ಪ್ರದೇಶವಾದ ಗಣಪತಿ ದೇವಸ್ಥಾನದಿಂದ ಬೇಡಕಿಹಾಳಗ್ರಾಮದ ಹಳ್ಳದವರೆಗೆ ಕಾಲುವೆ ನಿರ್ಮಿಸಿ, ಮುಖ್ಯ ಚರಂಡಿಗೆ ಜೋಡಿಸುವ ಕಾಮಗಾರಿಗೆ ಸಂಬಂಧಿಸಿದಂತೆ ರೂ.52,870/- ಹೀಗೆ ಒಟ್ಟು 2,35,638/- ರೂ.ಗಳಷ್ಟು ಸರ್ಕಾರಕ್ಕೆ ಆರ್ಥಿಕ ನಷ್ಟವುಂಟಾಗಿದ್ದು, ಸದರಿ ನಷ್ಟಕ್ಕೆ ಎದುರುದಾರರುಗಳು ಜವಾಬ್ದಾರರಾಗಿರುತ್ತಾರೆಂದು ವರದಿಯಲ್ಲಿ ತಿಳಿಸಿರುತ್ತಾರೆ.

ತನಿಖಾಧಿಕಾರಿಯವರು ತನಿಖೆಯ ಸಮಯದಲ್ಲಿ ಪಡೆದುಕೊಂಡ ದಾಖಲೆಗಳಿಂದ ಮತ್ತು ಸಾಕ್ಷಿಗಳ ಹೇಳಿಕೆಗಳಿಂದ ಹಾಗೂ ವರದಿಗಳಿಂದ ಈ ಕೆಳಕಂಡ ಅಂಶಗಳೂ ದೃಢಪಟ್ಟಿರುತ್ತವೆ:-

(1) ತನಿಖಾಧಿಕಾರಿಯವರು ಸಂಗ್ರಹಿಸಿದ 1ನೇ ಕಾಮಗಾರಿಗೆ ಸಂಬಂಧಪಟ್ಟ ಎನ್.ಎಂ.ಆರ್. ನಂಬರು 2804ರಲ್ಲಿರುವ ಕೂಲಿಕಾರರ ಹೆಬ್ಬೆಟ್ಟಿನ ಗುರುತುಗಳು, 2ನೇ ಕಾಮಗಾರಿಗೆ ಸಂಬಂಧಪಟ್ಟ ಎನ್.ಎಂ.ಆರ್. ನಂಬರು 4727 ಮತ್ತು 4245ರಲ್ಲಿರುವ ಕೂಲಿಕಾರರ ಹೆಬ್ಬೆಟ್ಟಿನ ಗುರುತುಗಳು, 3ನೇ ಕಾಮಗಾರಿಗೆ ಸಂಬಂಧಪಟ್ಟ ಎನ್.ಎಂ.ಆರ್. ನಂಬರು 3634, 2585, 2968 ಹಾಗೂ 4ನೇ ಕಾಮಗಾರಿಗೆ ಸಂಬಂಧಪಟ್ಟ ಎನ್.ಎಂ.ಆರ್. ನಂಬರು 5765 ಮತ್ತು ಎನ್.ಎಂ.ಆರ್. ನಂಬರು 9ರಲ್ಲಿನ ಕೂಲಿಕಾರರ ಹೆಬ್ಬೆಟ್ಟಿನ ಪ್ರಶ್ನಾತೀತ ಬೆರಳುಮುದ್ರೆಗಳನ್ನು ಹಾಗೂ ಸಾಕ್ಷಿದಾರರ ಮತ್ತು ಎದುರುದಾರರುಗಳ ಹಾಗೂ ಶ್ರೀ. ಮಾರುತಿ ಸಿದ್ದಪ್ಪ ಸುತಾರರವರ ಒಪ್ಪಿತ ಬೆರಳುಮುದ್ರೆ ಹಾಗೂ ಸಹಿಗಳನ್ನು ಪರೀಕ್ಷಿಸಿ ವರದಿ ನೀಡುವಂತೆ ಬೆರಳುಮುದ್ರೆ ಘಟಕ, ಮಡಿವಾಳ, ಬೆಂಗಳೂರುರವರಿಗೆ ತನಿಖಾಧಿಕಾರಿಯವರು ನೀಡಿರುತ್ತಾರೆ. ಸದರಿ ಬೆರಳುಮುದ್ರೆಗಳನ್ನು ಮತ್ತು ಸಹಿಗಳನ್ನು ಪರೀಕ್ಷಿಸಿ ತಜ್ಞರು ವರದಿ ನೀಡಿದ್ದು, **ಸದರಿ ವರದಿಯಲ್ಲಿ (1ಎ) ಪ್ರಶ್ನಾತೀತ ಬೆರಳುಮುದ್ರೆಗಳಾದ 'Q-42' ಮತ್ತು 'Q-43' ಒಪ್ಪಿತ ಮುದ್ರೆಗಳಾದ 3ನೇ ಎದುರುದಾರರ ಬಲಗೈ ಹೆಬ್ಬೆರಳು ಮುದ್ರೆಗೆ ಹೋಲಿಕೆಯಾಗಿರುತ್ತವೆಂದು ವರದಿ ನೀಡಿರುತ್ತಾರೆ.** (1ಬಿ) ಪ್ರಶ್ನಾತೀತ ಬೆರಳುಮುದ್ರೆಗಳಾದ 'Q-45', 'Q-47', 'Q-60', 'Q-65', 'Q-67', 'Q-71', 'Q-76', 'Q-77' ಮತ್ತು 'Q-78' ಒಪ್ಪಿತ ಮುದ್ರೆಗಳಾದ ಶ್ರೀ.

ಮಾರುತಿ ಸಿದ್ದಪ್ಪ ಸುತಾರರವರ ಎಡಗೈ ಹೆಬ್ಬೆರಳು ಮುದ್ರೆಗೆ ಹೋಲಿಕೆಯಾಗಿರುತ್ತವೆಂದು ವರದಿ ನೀಡಿರುತ್ತಾರೆ. (1ಸಿ) **ಪ್ರಶ್ನಾತೀತ ಬೆರಳುಮುದ್ರೆಗಳಾದ 'Q-69', 'Q-70', 'Q-72', 'Q-73', 'Q-74', 'Q-75', 'Q-81', 'Q-82', 'Q-83' ಮತ್ತು 'Q-92' ಒಪ್ಪಿತ ಮುದ್ರೆಗಳಾದ 4ನೇ ಎದುರುದಾರರ ಎಡಗೈ ಹೆಬ್ಬೆರಳು ಮುದ್ರೆಗೆ ಹೋಲಿಕೆಯಾಗಿರುತ್ತವೆಂದು ವರದಿ ನೀಡಿರುತ್ತಾರೆ.**

(2) 3ನೇ ಎದುರುದಾರರು ಬೇಡಕಿಹಾಳಗ್ರಾಮ ಪಂಚಾಯಿತಿಯಲ್ಲಿ ಬಿಲ್ ಕ್ಲರ್ಕ್ ಆಗಿ ಕೆಲಸಮಾಡುತ್ತಿದ್ದು, ಅಕುಶಲ ಕೂಲಿಕಾರರ ಸಹಿಗಳನ್ನು ವಿತ್ ಡ್ರಾಯಲ್ ಸ್ಲಿಪ್‌ಗಳ ಮೇಲೆ ಪಡೆದು, ಬೇಡಕಿಹಾಳ ಅಂಚೆ ಕಛೇರಿಯಲ್ಲಿ ಹಣ ಪಡೆದ ಬಗ್ಗೆ ವಿತ್ ಡ್ರಾಯಲ್ ಸ್ಲಿಪ್‌ಗಳ ಮೇಲೆ ಸಹಿಗಳನ್ನು ಮಾಡಿದ್ದು, ಅಂಚೆ ಕಛೇರಿಯ ದಾಖಲೆಗಳಿಂದ ದೃಢಪಟ್ಟಿರುತ್ತದೆ.

(3) 4ನೇ ಎದುರುದಾರರು ಬೇಡಕಿಹಾಳಗ್ರಾಮ ಪಂಚಾಯಿತಿಯಲ್ಲಿ ದಲಾಯತ್ ಆಗಿ ಕರ್ತವ್ಯನಿರ್ವಹಿಸುತ್ತಿದ್ದು, ಅವರು ಮತ್ತು ಶ್ರೀ. ಮಾರುತಿ ಸಿದ್ದಪ್ಪ ಸುತಾರರವರು ಅಕುಶಲ ಕೂಲಿಕಾರರ ಹೆಸರಿನಲ್ಲಿ ಬೇಡಕಿಹಾಳ ಅಂಚೆ ಕಛೇರಿಯಲ್ಲಿ ಖಾತೆಗಳನ್ನು ತೆರೆದು, ಸದರಿ ಖಾತೆಗಳಿಗೆ ಜಮಾ ಆದ ಹಣವನ್ನು ವಿತ್ ಡ್ರಾಯಲ್ ಮಾಡಿಕೊಂಡು ಬೇಡಕಿಹಾಳಗ್ರಾಮದ ಬ್ಯಾಂಕ್ ಆಫ್ ಬರೋಡ ಶಾಖೆಯ ಉಳಿತಾಯ ಖಾತೆಯಲ್ಲಿ ಹಣ ಜಮಾಮಾಡಿಕೊಂಡಿರುವುದು ಬ್ಯಾಂಕಿನವರು ನೀಡಿರುವ ದಾಖಲೆಗಳಿಂದ ದೃಢಪಟ್ಟಿರುತ್ತದೆ.

(4) ತನಿಖೆ ಕಾಲದಲ್ಲಿ ವಶಪಡಿಸಿಕೊಂಡ ಎನ್.ಎಂ.ಆರ್.ಗಳಲ್ಲಿಯ ಸಹಿಗಳಿಗೂ ಮತ್ತು ತನಿಖಾಧಿಕಾರಿಯವರು ಪಡೆದುಕೊಂಡ ಅಕುಶಲ ಕೂಲಿಕಾರರ ಕೋರಿಕೆ ಸಹಿಗಳಿಗೂ ಒಂದಕ್ಕೊಂದು ತಾಳೆಯಾಗಿರುವುದಿಲ್ಲ. ಬೇಡಕಿಹಾಳಗ್ರಾಮದ ತಾನಾಜಿ ಲಕ್ಷ್ಮಣ ಲೋಹಾರರವರು ದಿ: 15/07/2007 ರಂದು ಮತ್ತು ರುಕ್ಮಿಣಿ ಹನುಮಂತ ಮೀರಜ್‌ಕರ್‌ರವರು ದಿ: 11/07/2009 ರಂದು ಮರಣಹೊಂದಿದ್ದರೂ ಸಹ ಎನ್.ಎಂ.ಆರ್. ದಾಖಲೆಯಲ್ಲಿ ಅಕುಶಲ ಕಾರ್ಮಿಕರು ಎಂದು ನಮೂದಿಸಿ, ಕೆಲಸ ಮಾಡಿದಂತೆ ಹಾಜರಾತಿ ಹಾಕಿ ಹಣಪಡೆದಿರುವುದು ದಾಖಲೆಗಳಿಂದ ದೃಢಪಟ್ಟಿರುತ್ತದೆ.

(5) ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯಡಿಯಲ್ಲಿ:-

(i) ಉದ್ಯೋಗ ಬಯಸಿಬರುವ ಅಭ್ಯರ್ಥಿಗಳಿಂದ ಅರ್ಜಿಪಡೆದು, ಉಚಿತವಾಗಿ ನೀಡುವ ನಮೂನೆ-1 ನೀಡಿ ನೋಂದಣಿ ಮಾಡಿಕೊಂಡಿರುವುದಿಲ್ಲ.

(ii) ಕಾಮಗಾರಿಯ ಕೆಲಸವನ್ನು ನಿರ್ವಹಿಸುವ ಕಾಲಕ್ಕೆ ಅಕುಶಲ ಕೂಲಿಕಾರರು ಕೆಲಸಮಾಡುವ ಭಾವಚಿತ್ರವನ್ನು ತೆಗೆದಿರುವುದಿಲ್ಲ.

(iii) ಕಾಮಗಾರಿಯ ಫೋಟೋಗಳನ್ನು ಪರಿಶೀಲಿಸಲಾಗಿ ಎನ್.ಎಂ.ಆರ್. ಪಟ್ಟಿಯಲ್ಲಿ ನಮೂದಿಸಿರುವಷ್ಟು ಜನರು ಕಾಮಗಾರಿಯಲ್ಲಿ ತೊಡಗಿರುವುದಿಲ್ಲ.

(iv) ಕಾಮಗಾರಿಗಳನ್ನು ಅಕುಶಲ ಕೂಲಿಕಾರರಿಂದ ಮಾಡಿಸದೇ, ಗುತ್ತಿಗೆದಾರರಿಗೆ ನೀಡಿ ಯಂತ್ರೋಪಕರಣಗಳನ್ನು ಬಳಸಿಕೊಂಡು ಕಾಮಗಾರಿಗಳನ್ನು ಮಾಡಿರುವುದು ಮೇಲ್ನೋಟಕ್ಕೆ ಕಂಡುಬಂದಿರುತ್ತದೆ.

(6) ಎದುರುದಾರರು ಅಕುಶಲ ಕೂಲಿಕಾರರಿಂದ ಕಾಮಗಾರಿಗಳನ್ನು ಮಾಡಿಸಿದಂತೆ ಎನ್.ಎಂ.ಆರ್.ಗಳನ್ನು ತಯಾರಿಸಿ, ಬೇಡಕಿಹಾಳಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಬರುವ ಹಳ್ಳಿಗಳ ಜನರ ಹೆಸರನ್ನು ನಮೂದಿಸಿ ಅವರಿಗೆ ರೇಷನ್ ಕಾರ್ಡ್ ಮಾಡಿಸುವ ಸಲುವಾಗಿ ಫೋಟೋಗಳನ್ನು ಪಡೆದುಕೊಂಡಿದ್ದು ಮತ್ತು ಬೇರೆಯವರು ಕೆಲಸ ಮಾಡಿದ್ದು, ಅವರಿಗೆ ಕೂಲಿ ನೀಡಬೇಕಾಗಿದೆ ಎಂದು ಹೇಳಿ, ವಿತ್ ಡ್ರಾಯಲ್ ಸ್ಲಿಪ್‌ಗಳ ಮೇಲಿನ ಸಾಕ್ಷಿದಾರರ ಸಹಿ / ಹೆಬ್ಬೆಟ್ಟು ಆ ಸಾಕ್ಷಿಗಳ ಹೇಳಿಕೆಗಳಿಂದ ದೃಢಪಟ್ಟಿರುತ್ತದೆ.

(10) 2 ರಿಂದ 6ನೇ ಎದುರುದಾರರು ಸರ್ಕಾರಿ ನೌಕರರಾಗಿದ್ದು, 1ನೇ ಎದುರುದಾರರು ಬೇಡಕಿಹಾಳ ಗ್ರಾಮ ಪಂಚಾಯಿತಿಯ ಅಧ್ಯಕ್ಷರಾಗಿರುತ್ತಾರೆ. 1 ರಿಂದ 6ನೇ ಎದುರುದಾರರು 2010-11 ಸಾಲಿನ ಪಿ.ಎಂ.ಜಿ.ಎಸ್.ವೈ. ಯೋಜನೆ ಅಡಿಯಲ್ಲಿ ಬೇಡಕಿಹಾಳ ಗ್ರಾಮ ಪಂಚಾಯಿತಿಗೆ ಸಂಬಂಧಪಟ್ಟಂತೆ ನಾಲ್ಕು ಕಾಮಗಾರಿಗಳನ್ನು ಅಂದಾಜು ಪಟ್ಟಿಯಂತೆ ಅನುಷ್ಠಾನಗೊಳಿಸದೇ ಕಾಮಗಾರಿಗಳನ್ನು ಪೂರ್ಣಗೊಳಿಸಿದೆ ಎಂದೂ, ಅವರ ಅಧಿಕಾರ ದುರುಪಯೋಗಪಡಿಸಿ ಅವ್ಯವಹಾರ ಮಾಡಿ ಒಟ್ಟು 2,35,638/- ರೂ.ಗಳಷ್ಟು ಸರ್ಕಾರಕ್ಕೆ ಆರ್ಥಿಕ ನಷ್ಟವುಂಟುಮಾಡಿರುತ್ತಾರೆಂದು ದೋಷಾರೋಪಣ ಪತ್ರ ಸಲ್ಲಿಸಲಾಗಿದೆ.

iv) ದೂರು ಅರ್ಜಿ, ಸಾಕ್ಷಿದಾರರ ಹೇಳಿಕೆಗಳು ಹಾಗೂ ತನಿಖಾಧಿಕಾರಿಯವರು ಸಂಗ್ರಹಿಸಿದ ದಾಖಲಾತಿಗಳು, ತಜ್ಞರ ವರದಿ ಮತ್ತು ಇತರೆ ಅಂಶಗಳು, ಎದುರುದಾರರುಗಳ ಸತತವಾದ ಕರ್ತವ್ಯಲೋಪ ಹಾಗೂ ದುರ್ನಡತೆಯನ್ನು ತೋರಿಸುತ್ತದೆ.

3. ಎದುರುದಾರರುಗಳಿಗೆ ಪರಿವೀಕ್ಷಣಾ ಟಿಪ್ಪಣಿಯನ್ನು ಕಳುಹಿಸಿದ್ದು, 1 ರಿಂದ 3ನೇ ಎದುರುದಾರರು ದಿ: 21/10/2022 ರಂದು ಮತ್ತು 4ನೇ ಎದುರುದಾರರು ದಿ: 27/10/2022 ರಂದು, 5ನೇ ಎದುರುದಾರರು ದಿ: 29/10/2022 ರಂದು ಮತ್ತು 6ನೇ ಎದುರುದಾರರು ದಿ:28/10/2022 ರಂದು ಪರಿವೀಕ್ಷಣಾ ಟಿಪ್ಪಣಿಗೆ ಆಕ್ಷೇಪಣೆಗಳನ್ನು ಸಲ್ಲಿಸಿರುತ್ತಾರೆ. ಅವರುಗಳ ಆಕ್ಷೇಪಣೆಯಲ್ಲಿ ಪರಿವೀಕ್ಷಣಾ ಟಿಪ್ಪಣಿಯ ಎಲ್ಲಾ ಅಂಶಗಳನ್ನು ಅಲ್ಲಗಳೆದಿರುತ್ತಾರೆ.

1ನೇ ಎದುರುದಾರರು ಅವರ ಆಕ್ಷೇಪಣೆಯಲ್ಲಿ "ದಿ: 18/06/2010 ರಿಂದ 12/12/2012 ರವರೆಗೆ ಆಧ್ಯಕ್ಷರಾಗಿದ್ದು, ಉದ್ಯೋಗ ಖಾತ್ರಿ ಯೋಜನೆಯಡಿ ಮಂಜೂರಾದ ಎಲ್ಲಾ ಕಾಮಗಾರಿಗಳನ್ನು ನಿರ್ವಹಿಸಲಾಗಿದೆ ಮತ್ತು ಕಾಮಗಾರಿಗಳಲ್ಲಿ ಕೆಲಸ ನಿರ್ವಹಿಸಿದ ಕೂಲಿಕಾರರ ಬ್ಯಾಂಕ್ ಖಾತೆಗಳಿಗೆ ನೇರವಾಗಿ ಜಮಾ ಆಗಿರುತ್ತದೆ. ಗಣಪತಿ ದೇವಸ್ಥಾನದಿಂದ ಬೇಡಕಿಹಾಳ ಗ್ರಾಮದ ನಾಲಾದ ವರೆಗೆ ಚರಂಡಿ ನಿರ್ಮಾಣದ ಕಾಮಗಾರಿಯ ಕೂಲಿಕಾರರಿಗೆ ಹಣ ಪಾವತಿಸುವ ವೇಳೆಯಲ್ಲಿ ದೂರುದಾರರು ತಕರಾರು ಮಾಡಿರುತ್ತಾರೆ ಹಾಗೂ ಸಾರ್ವಜನಿಕ ಹಿತದೃಷ್ಟಿಯಿಂದ ಜಾಗೃತಿ ಸಮಿತಿ ನಡಾವಳಿ ಅನ್ವಯ ಕಾಮಗಾರಿ ಕೈಗೆತ್ತಿಕೊಳ್ಳಲಾಗಿದೆ" ಎಂದು ತಿಳಿಸಿರುತ್ತಾರೆ.

2ನೇ ಎದುರುದಾರರು ಅವರ ಆಕ್ಷೇಪಣೆಯಲ್ಲಿ "ದಿ: 31/03/1994 ರಲ್ಲಿ ಸೇವೆಯಲ್ಲಿ ಖಾಯಂಗೊಂಡು ದಿ: 31/03/2017 ರವರೆಗೆ ಬೇಡಕಿಹಾಳ ಗ್ರಾಮ ಪಂಚಾಯಿತಿಯಲ್ಲಿ ಪಿ.ಡಿ.ಓ. ಆಗಿ ಕರ್ತವ್ಯ ನಿರ್ವಹಿಸಿ ದಿ: 31/03/2017 ರಲ್ಲಿ ವಯೋನಿವೃತ್ತಿ ಹೊಂದಿರುವುದಾಗಿ ಉದ್ಯೋಗ ಖಾತ್ರಿ ಯೋಜನೆಯಡಿ ಮಂಜೂರಾದ ಕಾಮಗಾರಿಗಳನ್ನು ಅಚ್ಚುಕಟ್ಟಾಗಿ ಕ್ರಿಯಾ ಯೋಜನೆ ರೀತಿಯಲ್ಲಿಯೇ ಅನುಷ್ಠಾನಗೊಳಿಸಿರುವುದಾಗಿ" ತಿಳಿಸಿರುತ್ತಾರೆ.

3ನೇ ಎದುರುದಾರರು ಅವರ ಆಕ್ಷೇಪಣೆಯಲ್ಲಿ "ಉದ್ಯೋಗ ಖಾತ್ರಿ ಯೋಜನೆಯಡಿ ಕೈಗೊಂಡ ಕಾಮಗಾರಿಗಳಲ್ಲಿನ ಕೂಲಿಕಾರರ ಕೂಲಿಹಣ ಬೇಡಕಿಹಾಳ ಗ್ರಾಮದ ಅಂಚೆ ಕಛೇರಿಯಲ್ಲಿ ಜಮಾ ಆಗುತ್ತಿತ್ತು. ಗ್ರಾಮ ಪಂಚಾಯಿತಿ ಅಧ್ಯಕ್ಷರು ಮತ್ತು ಪಿ.ಡಿ.ಓ.ರವರು ಪೋಸ್ಟ್ ಮಾಸ್ಟರ್ ಬೇಡಕಿಹಾಳರವರಿಗೆ ಭೇಟಿಯಾಗಿ ಕೂಲಿಹಣವನ್ನು ಗ್ರಾಮ ಪಂಚಾಯಿತಿ ಸಿಬ್ಬಂದಿಗಳ ಮೂಲಕ ಸಲ್ಲಿಸಲು ವಿನಂತಿಸಿದ್ದರು. ಕೆಲಸ ನಿರ್ವಹಿಸಿದ ಕೂಲಿಕಾರರು ಗ್ರಾಮ ಪಂಚಾಯಿತಿ ಜವಾನನ ಕಡೆ ವಿತ್ ಡ್ರಾಯಲ್ ಸ್ಲಿಪ್‌ಗಳ ಮೇಲೆ ಸಹಿಮಾಡಿಸಿ, ಜಮಾ ಮಾಡುತ್ತಿದ್ದರು. ನಂತರ ಪೋಸ್ಟ್ ಆಫೀಸ್‌ನವರು ಸಹಿ ಪಡೆದು ಮೊತ್ತವನ್ನು ನೀಡುತ್ತಿದ್ದರು" ಎಂದು ತಿಳಿಸಿರುತ್ತಾರೆ.

4ನೇ ಎದುರುದಾರರು ಅವರ ಆಕ್ಷೇಪಣೆಯಲ್ಲಿ "ದಿ: 01/11/2010 ರಿಂದ ಬೇಡಕಿಹಾಳ ಗ್ರಾಮ ಪಂಚಾಯಿತಿಯಲ್ಲಿ ಜವಾನನಾಗಿ ಕರ್ತವ್ಯ ನಿರ್ವಹಿಸುತ್ತಿದ್ದು, ಗ್ರಾಮ ಪಂಚಾಯಿತಿ ಅಧ್ಯಕ್ಷರು ಮತ್ತು ಪಿ.ಡಿ.ಓ.ರವರು ವಹಿಸುವ ಕರ್ತವ್ಯ ನಿರ್ವಹಿಸುತ್ತಿರುತ್ತೇನೆಂದು, ಕಾಮಗಾರಿಗಳಿಗೆ ಸಂಬಂಧಿಸಿದಂತೆ ಬೇಡಕಿಹಾಳ ಗ್ರಾಮದ ಅಂಚೆ ಕಛೇರಿಗಳಲ್ಲಿ ಕೂಲಿಕಾರರ ಹೆಸರಿನಲ್ಲಿ ಖಾತೆಗಳನ್ನು ತೆರೆದು ಜಮಾ ಮಾಡಿಕೊಳ್ಳುವುದು ಶ್ರೀ. ಮಾರುತಿ ಸಿದ್ದಪ್ಪ ಸುತಾರ ರವರಿಗೆ ವಹಿಸಿದ್ದು, ತದನಂತರ ಅಧ್ಯಕ್ಷರು ಮತ್ತು ಪಿ.ಡಿ.ಓ.ರವರು ನನ್ನ ಖಾತೆಗೆ ಕೂಲಿಹಣ ಜಮೆ ತೆಗೆದುಕೊಳ್ಳುವ ಬಗ್ಗೆ ಸೂಚಿಸಿದಂತೆ ಬ್ಯಾಂಕ್ ಆಫ್ ಬರೋಡ ಖಾತೆಗೆ ಜಮಾ ತೆಗೆದುಕೊಂಡಿರುತ್ತೇನೆ. ಅಲ್ಲದೆ, ಬಿಲ್ ಕ್ಲರ್ಕ್ ಹೇಳಿದಂತೆ ಜಮೆಯಾದ ಹಣವನ್ನು ಅಧ್ಯಕ್ಷರು ಮತ್ತು ಪಿ.ಡಿ.ಓ.ರವರು ಪೋಸ್ಟ್ ಮಾಸ್ಟರ್‌ಗೆ ಭೇಟಿಯಾಗಿ ಕೂಲಿಹಣವನ್ನು ಗ್ರಾಮ ಪಂಚಾಯಿತಿ ಸಿಬ್ಬಂದಿಗಳ ಮೂಲಕ ಸಲ್ಲಿಸಲು ತಿಳಿಸಿದ್ದರು. ಕೆಲಸ ನಿರ್ವಹಿಸಿದ ಕೂಲಿಕಾರರು ಗ್ರಾಮ ಪಂಚಾಯಿತಿ ಸಿಬ್ಬಂದಿ ಹಾಗೂ ನನ್ನ ಕಡೆ ವಿತ್ ಡ್ರಾಯಲ್ ಸ್ಲಿಪ್ಸ್‌ಗಳ ಮೇಲೆ ಸಹಿ ಮಾಡಿಸಿ ನೀಡುತ್ತಿದ್ದರು. ಅಂಚೆ ಕಛೇರಿ ಸಿಬ್ಬಂದಿ ವಿತ್ ಡ್ರಾಯಲ್ ಸ್ಲಿಪ್ಸ್‌ಗಳನ್ನು ಪರಿಶೀಲಿಸಿ ಹಣ ನೀಡುತ್ತಿದ್ದರು. ನನ್ನ ಬ್ಯಾಂಕ್ ಖಾತೆಯಲ್ಲಿಟ್ಟಿದ್ದ ಕೂಲಿಹಣವನ್ನು ಅಧ್ಯಕ್ಷರು ಮತ್ತು ಪಿ.ಡಿ.ಓ.ರವರು ಸೂಚಿಸಿದಂತೆ ಬ್ಯಾಂಕಿನಿಂದ ವಿತ್ ಡ್ರಾಯಲ್ ಮಾಡಿ ಅಧ್ಯಕ್ಷರು ಮತ್ತು ಪಿ.ಡಿ.ಓ.ರವರಿಗೆ ನೀಡುತ್ತಿದ್ದು, ಅವರ ಉಪಸ್ಥಿತಿಯಲ್ಲಿ ಕೂಲಿಕಾರರಿಗೆ ಹಣ ನೀಡಲಾಗುತ್ತಿತ್ತು ಹಾಗೂ ಕುಟುಂಬದಲ್ಲಿ ಬಂದವರ ಸಹಿಪಡೆದಿದ್ದು, ಅವು ಒಂದಕ್ಕೊಂದು ತಾಳೆ ಆಗಲಿಕ್ಕಿಲ್ಲವೆಂದು" ತಿಳಿಸಿರುತ್ತಾರೆ.

5ನೇ ಎದುರುದಾರರು ಅವರ ಆಕ್ಷೇಪಣೆಯಲ್ಲಿ "2010-11ನೇ ಸಾಲಿನಲ್ಲಿ ಬೇಡಕಿಹಾಳ ಗ್ರಾಮ ಪಂಚಾಯಿತಿಯ ಉದ್ಯೋಗ ಖಾತ್ರಿ ಯೋಜನೆಯಡಿಯ ಕಾಮಗಾರಿಗಳನ್ನು ಕಾರ್ಯಗತಗೊಳಿಸಿದ್ದು, ಕಾಮಗಾರಿಗಳನ್ನು ನಿರ್ವಹಿಸುವ ಕೂಲಿಗಾರರ ನೇಮಕ, ಹಾಜರಾತಿ, ಕೂಲಿಹಣ, ಬಟಾವಡೆ, ಎಲ್ಲಾ ಕೆಲಸಗಳ ನಿರ್ವಹಣೆ ಸಂಪೂರ್ಣವಾಗಿ

ಗ್ರಾಮ ಪಂಚಾಯಿತಿಯ ಅಧ್ಯಕ್ಷರು ಮತ್ತು ಪಿ.ಡಿ.ಓ. ಜವಾಬ್ದಾರರಾಗಿರುತ್ತಾರೆ. ಸದರಿ ಕಾಮಗಾರಿಗಳು ತಾಲ್ಲೂಕು ಪಂಚಾಯಿತಿ ಕಾರ್ಯ ನಿರ್ವಾಹಕರ ಉಸ್ತುವಾರಿಯಲ್ಲಿ ಆಗಿರುತ್ತದೆ ಹಾಗೂ ಮುಖ್ಯ ಕಾರ್ಯ ನಿರ್ವಾಹಕಾಧಿಕಾರಿ ಕಾಮಗಾರಿಗಳನ್ನು ಪುನರ್ ಪರಿಶೀಲನೆಗೆ ಒಳಪಡಿಸಿರುತ್ತಾರೆ. ಲೆಕ್ಕಪತ್ರಗಳಿಗೆ ಸಂಬಂಧಿಸಿದಂತೆ ಲೆಕ್ಕ ಪರಿಶೋಧನಾ ಪ್ರಕ್ರಿಯೆಗೆ ಒಳಪಟ್ಟಿರುತ್ತದೆ. ಭೌತಿಕ ಹಾಗೂ ಆರ್ಥಿಕ ಪರಿಶೀಲನೆಯಲ್ಲಿ ಯಾವುದೇ ಲೋಪದೋಷಗಳು ಬಂದಿರುವುದಿಲ್ಲವೆಂದು" ತಿಳಿಸಿರುತ್ತಾರೆ.

6ನೇ ಎದುರುದಾರರು ಅವರ ಆಕ್ಷೇಪಣೆಯಲ್ಲಿ "ಸಹಾಯಕ ಕಾರ್ಯಪಾಲಕ ಅಭಿಯಂತರರಾಗಿ ಕಾರ್ಯ ನಿರ್ವಹಿಸುತ್ತಿದ್ದ ಸಮಯದಲ್ಲಿ ಬೇಡಕಿಹಾಳ ಗ್ರಾಮ ಪಂಚಾಯಿತಿಯಲ್ಲಿ ಉದ್ಯೋಗ ಖಾತ್ರಿ ಯೋಜನೆಯಡಿಯಲ್ಲಿ ಕೈಗೊಂಡ ಕಾಮಗಾರಿಗಳ ಬಗ್ಗೆ ಸದರಿ ಪಂಚಾಯಿತಿಯ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ಅನುಷ್ಠಾನಾಧಿಕಾರಿಯಾಗಿರುತ್ತಾರೆ, ತಾಲ್ಲೂಕು ಪಂಚಾಯಿತಿ ಅಭಿವೃದ್ಧಿ ಅಧಿಕಾರಿ, ಮೇಲಾಧಿಕಾರಿಯಾಗಿರುತ್ತಾರೆ. ಬೇಡಕಿಹಾಳ ಗ್ರಾಮ ಪಂಚಾಯಿತಿಗೆ ಬರುವ ಅಭಿಯಂತರರು ತಯಾರಿಸಲ್ಪಟ್ಟ ಅಂದಾಜು ಪತ್ರಿಕೆಗಳನ್ನು, ಯೋಜನೆಯಲ್ಲಿ ನಿಗದಿಗೊಳಿಸಿದ ಕೆಲಸದ ಮೊತ್ತಕ್ಕೆ ಅನುಗುಣವಾಗಿ ತಾಂತ್ರಿಕ ಮಂಜೂರಾತಿ ಕೊಡುವ ಕೆಲಸ ನಿರ್ವಹಿಸಲ್ಪಟ್ಟಿರುತ್ತದೆ. ಇವರು 5ನೇ ಎದುರುದಾರರು ಸಲ್ಲಿಸಿದ ಆಕ್ಷೇಪಣೆಗಳನ್ನೇ ಪುನರುಚ್ಚರಿಸಿರುತ್ತಾರೆ. ಇವರ ಅಧೀನ ಶಾಖಾಧಿಕಾರಿಯಿಂದ ಅಳತೆ ಬರೆಯಲ್ಪಟ್ಟ ಕೆಲಸವನ್ನು ಪರಿಶೀಲಿಸಿ ಸರಿಯೆಂದು ಕಂಡುಬಂದಿದ್ದಕ್ಕೆ ಪರಿಶೀಲಿಸಿದೆ ಎಂದು ನಮೂದಿಸಿರುವುದಾಗಿ ತಿಳಿಸಿರುತ್ತಾರೆ. ಅವರು ದಿ: 31/07/2020 ರಂದು ವಯೋನಿವೃತ್ತಿ ಹೊಂದಿರುವುದಾಗಿ" ತಿಳಿಸಿರುತ್ತಾರೆ.

1 ರಿಂದ 6ನೇ ಎದುರುದಾರರು ಸಲ್ಲಿಸಿದ ಆಕ್ಷೇಪಣೆಗಳಿಂದ 1ನೇ ಎದುರುದಾರರು ದಿ: 18/06/2010 ರಿಂದ 12/12/2012 ರವರೆಗೆ ಬೇಡಕಿಹಾಳ ಗ್ರಾಮ ಪಂಚಾಯಿತಿಯ ಅಧ್ಯಕ್ಷ ಸ್ಥಾನವನ್ನು ಹೊಂದಿದ್ದು, 2ನೇ ಎದುರುದಾರರು ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಯಾಗಿ ಕರ್ತವ್ಯ ನಿರ್ವಹಿಸಿರುವುದಾಗಿ, ಆ ಸಮಯದಲ್ಲಿ 3ನೇ ಎದುರುದಾರರು ಬಿಲ್ ಕ್ಲರ್ಕ್ ಆಗಿ ಕರ್ತವ್ಯ ನಿರ್ವಹಿಸುತ್ತಿದ್ದುದಾಗಿ ಮತ್ತು 4ನೇ ಎದುರುದಾರರು ಜವಾನನಾಗಿ ಕರ್ತವ್ಯ ನಿರ್ವಹಿಸುತ್ತಿದ್ದುದಾಗಿ ತಿಳಿಸಿರುತ್ತಾರೆ. 3 ಮತ್ತು 4ನೇ ಎದುರುದಾರರು ಬೇಡಕಿಹಾಳ ಗ್ರಾಮ ಪಂಚಾಯಿತಿಯ ಅಧ್ಯಕ್ಷರು ಮತ್ತು ಪಿ.ಡಿ.ಓ.ರವರು ತಿಳಿಸಿದ ಕೆಲಸಗಳನ್ನು ನಿರ್ವಹಿಸುತ್ತಿದ್ದೆವೆಂದು ತಿಳಿಸಿರುತ್ತಾರೆ. ಉದ್ಯೋಗ ಖಾತ್ರಿ ಯೋಜನೆಯಡಿ ಕೈಗೊಂಡ ಕಾಮಗಾರಿಗಳಿಗೆ ಸಂಬಂಧಿಸಿದಂತೆ ಕೂಲಿಕಾರರ ಹಣ ಬೇಡಕಿಹಾಳ ಗ್ರಾಮದ ಅಂಚೆ ಕಛೇರಿಯಲ್ಲಿ ಜಮಾ ಆಗುತ್ತಿತ್ತು, ಸದರಿ ಹಣವನ್ನು ಅಧ್ಯಕ್ಷರು ಮತ್ತು ಪಂಚಾಯಿತಿ ಅಭಿವೃದ್ಧಿ ಅಧಿಕಾರಿಯವರು 4ನೇ ಎದುರುದಾರರ ಬ್ಯಾಂಕ್ ಆಫ್ ಬರೋಡ ಖಾತೆಗೆ

ಕೂಲಿಹಣ ಜಮೆ ತೆಗೆದುಕೊಳ್ಳುವ ಬಗ್ಗೆ ಸೂಚಿಸಿದಂತೆ ಜಮೆ ತೆಗೆದುಕೊಂಡಿರುವುದಾಗಿ ತಿಳಿಸಿರುತ್ತಾರೆ ಮತ್ತು ಪೋಸ್ಟ್ ಮಾಸ್ಟರ್‌ಗೆ ಭೇಟಿಯಾಗಿ ಕೂಲಿಹಣವನ್ನು ಗ್ರಾಮ ಪಂಚಾಯಿತಿ ಸಿಬ್ಬಂದಿಗಳ ಮೂಲಕ ಸಲ್ಲಿಸಲು ತಿಳಿಸಿದ್ದಲ್ಲದೆ, ಸಿಬ್ಬಂದಿಗಳ ಮೂಲಕ ವಿತ್ ಡ್ರಾಯಲ್ ಸ್ಲಿಪ್‌ಗಳ ಮೇಲೆ ಸಹಿಮಾಡಿಸಿ ಅಂಚೆ ಕಛೇರಿಗೆ ನೀಡುತ್ತಿದ್ದು, ಅವುಗಳನ್ನು ಪರಿಶೀಲಿಸಿ, ಅಂಚೆ ಕಛೇರಿಯವರು ಹಣ ನೀಡುತ್ತಿರುವುದಾಗಿ ತಿಳಿಸಿರುತ್ತಾರೆ. ಮಸ್ಟರ್ ರೋಲ್‌ನಲ್ಲಿ ನಮೂದಿಸಿದ ಕೂಲಿಕಾರರ ಹೇಳಿಕೆಗಳಲ್ಲಿ ತಾವು ಬೇಡಕಿಹಾಳ ಗ್ರಾಮ ಪಂಚಾಯಿತಿಗೆ ಸಂಬಂಧಪಟ್ಟ ಯಾವುದೇ ಕಾಮಗಾರಿಗಳಲ್ಲೂ ಕೂಲಿ ಮಾಡಿರುವುದಿಲ್ಲವೆಂದು ತಿಳಿಸಿದ್ದಲ್ಲದೆ, ರೇಷನ್ ಕಾರ್ಡ್ ಪಡೆಯುವ ಉದ್ದೇಶಕ್ಕೆ ಗ್ರಾಮ ಪಂಚಾಯಿತಿ ಸಿಬ್ಬಂದಿಯವರು ಸಹಿ ಪಡೆದಿರುವುದಾಗಿ ಹೇಳಿಕೆ ನೀಡಿರುತ್ತಾರೆ. ತನಿಖಾಧಿಕಾರಿಯವರು ಸಂಗ್ರಹಿಸಿದ ದಾಖಲೆಗಳಿಂದ 1 ರಿಂದ 6ನೇ ಎದುರುದಾರರು ಯೋಜನೆಯನ್ವಯ ಕಾಮಗಾರಿಯನ್ನು ಪೂರ್ಣಗೊಳಿಸಿದೇ ಎಂಬ ಖೊಟ್ಟಿ ದಾಖಲೆಗಳನ್ನು ಸೃಷ್ಟಿಸಿ, ಕಾಮಗಾರಿಗಳಿಗೆ ಸಂಬಂಧಪಟ್ಟ ಹಣವನ್ನು ಚೆಕ್ ಮುಖಾಂತರ ಪಡೆದು ಸರ್ಕಾರದ ಬೊಕ್ಕಸಕ್ಕೆ ಆರ್ಥಿಕ ನಷ್ಟವುಂಟುಮಾಡಿರುವುದು ಸ್ಪಷ್ಟವಾಗಿರುವುದರಿಂದ ಪ್ರಕರಣ ಮುಕ್ತಾಯಗೊಳಿಸಲು ಸೂಕ್ತ ಕಾರಣಗಳಾಗಿ ಕಂಡುಬರುವುದಿಲ್ಲ.

4. ದೂರು ಅರ್ಜಿ, ಸಾಕ್ಷಿದಾರರ ಹೇಳಿಕೆಗಳು, ತನಿಖಾಧಿಕಾರಿ ಸಂಗ್ರಹಿಸಿದ ದಾಖಲೆಗಳು ಹಾಗೂ ದೋಷಾರೋಪಣ ಪತ್ರದಲ್ಲಿರುವ ಮಾಹಿತಿಗಳಿಂದ 1 ರಿಂದ 6ನೇ ಎದುರುದಾರರು ನೀಡಿರುವ ಉತ್ತರಗಳನ್ನು ಕೂಲಂಕಷವಾಗಿ ಪರಿಶೀಲಿಸಲಾಗಿ, ಎದುರುದಾರರುಗಳ ವಿರುದ್ಧ ನಡಾವಳಿಯನ್ನು ಕೈಬಿಡಲು ಸೂಕ್ತ / ಸಮಂಜಸ / ಸಮಾಧಾನಕರ ಕಾರಣಗಳನ್ನು ತೋರಿಸಿಲ್ಲವೆಂದು ಅಭಿಪ್ರಾಯಕ್ಕೆ ಬರಲಾಗಿದೆ.

5. ಈ ಪ್ರಕರಣದಲ್ಲಿ 1ನೇ ಎದುರುದಾರರು ದಿ: 18/06/2010 ರಿಂದ 12/12/2012ರವರೆಗೆ ಬೇಡಕಿಹಾಳ ಗ್ರಾಮ ಪಂಚಾಯಿತಿಯ ಅಧ್ಯಕ್ಷರಾಗಿ ಕರ್ತವ್ಯ ನಿರ್ವಹಿಸಿರುತ್ತಾರೆ. 2ನೇ ಎದುರುದಾರರು ಬೇಡಕಿಹಾಳ ಗ್ರಾಮ ಪಂಚಾಯಿತಿಯ ಪಂಚಾಯತ್ ಅಭಿವೃದ್ಧಿ ಅಧಿಕಾರಿಯಾಗಿ ಕರ್ತವ್ಯ ನಿರ್ವಹಿಸಿ, ದಿ: 31/03/2017 ರಂದು ವಯೋನಿವೃತ್ತಿ ಹೊಂದಿರುತ್ತಾರೆ. 6ನೇ ಎದುರುದಾರರು ಸಹಾಯಕ ಕಾರ್ಯಪಾಲಕ ಅಭಿಯಂತರರಾಗಿ ದಿ: 31/07/2020 ರಂದು ವಯೋನಿವೃತ್ತಿ ಹೊಂದಿರುತ್ತಾರೆ. ಪ್ರಸ್ತುತ ಪ್ರಕರಣದಲ್ಲಿ 2010-11ನೇ ಸಾಲಿನಲ್ಲಿ ಬೇಡಕಿಹಾಳ ಗ್ರಾಮ ಪಂಚಾಯಿತಿಯಲ್ಲಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯಡಿಯಲ್ಲಿಯ ನಿಯಮಗಳನ್ನು ಪಾಲಿಸದೆ ಮತ್ತು ಕಾಮಗಾರಿಗಳನ್ನು ನಿರ್ವಹಿಸದೆ, ಕಾಮಗಾರಿಗಳನ್ನು ನಿರ್ವಹಿಸಿದಂತೆ ಖೊಟ್ಟಿ ದಾಖಲೆಗಳನ್ನು ಸೃಷ್ಟಿಸುವ ಮೂಲಕ ಕರ್ತವ್ಯಲೋಪವೆಸಗಿ 1 ರಿಂದ 6ನೇ ಎದುರುದಾರರುಗಳು ಅಧಿಕಾರ

ದುರುಪಯೋಗಪಡಿಸಿಕೊಂಡು ಸರ್ಕಾರದ ಬೊಕ್ಕಸಕ್ಕೆ ಆರ್ಥಿಕ ನಷ್ಟವುಂಟುಮಾಡಿರುವುದು ಸ್ಪಷ್ಟವಾಗಿ ಕಂಡುಬರುತ್ತದೆ. ಪ್ರಸ್ತುತ ಪ್ರಕರಣದ ಘಟನೆಯು ನಡೆದು 10 ವರ್ಷಗಳಾಗಿರುವುದರಿಂದ ಮತ್ತು 1ನೇ ಎದುರುದಾರರು ನಂತರ ಅಧ್ಯಕ್ಷ ಸ್ಥಾನ ಹೊಂದಿಲ್ಲವಾದ್ದರಿಂದ 2 ಮತ್ತು 6ನೇ ಎದುರುದಾರರು ವಯೋನಿವೃತ್ತಿ ಹೊಂದಿರುವುದರಿಂದ ಕರ್ನಾಟಕ ನಾಗರಿಕ ಸೇವಾ (ನಡತೆ) ನಿಯಮಗಳು, ನಿಯಮ 214(2)(b)(ii)ರನ್ವಯ ಇಲಾಖಾ ವಿಚಾರಣೆಗೆ ಅವಕಾಶವಿರುವುದಿಲ್ಲ. ಮಾನ್ಯ ಕರ್ನಾಟಕ ಉಚ್ಛ ನ್ಯಾಯಾಲಯದ ರಿಟ್ ಪಿಟಿಷನ್ ನಂ.1552/2021ರ ಪ್ಯಾರಾ-4 ರಲ್ಲಿ ಎದುರುದಾರರುಗಳಿಂದ ಸರ್ಕಾರಕ್ಕೆ ಆರ್ಥಿಕ ನಷ್ಟವುಂಟಾಗಿದ್ದಲ್ಲಿ ಅಂತಹ ಆರ್ಥಿಕ ನಷ್ಟವನ್ನು ಸರ್ಕಾರವೇ ಕಾನೂನಿನಡಿಯಲ್ಲಿ ವಸೂಲಿ ಮಾಡಬಹುದೆಂದು ಉಲ್ಲೇಖಿಸಿರುತ್ತದೆ. ಆ ಕಾರಣ, ಸರ್ಕಾರವೇ 1, 2 ಮತ್ತು 6ನೇ ಎದುರುದಾರರಗಳ ವಿರುದ್ಧ ಆರ್ಥಿಕ ನಷ್ಟವುಂಟಾದ ಬಗ್ಗೆ ಕ್ರಮ ಕೈಗೊಳ್ಳಬಹುದೆಂದು ಸರ್ಕಾರಕ್ಕೆ ಶಿಫಾರಸ್ಸು ಮಾಡಲಾಗಿದೆ.

6. ಕರ್ನಾಟಕ ಲೋಕಾಯುಕ್ತ ಕಾಯಿದೆ 1984ರ ಕಲಂ 2 (12) ರ ಪ್ರಕಾರ 3, 4 ಮತ್ತು 5ನೇ ಎದುರುದಾರರುಗಳು ಸರ್ಕಾರಿ / ಸಾರ್ವಜನಿಕ ನೌಕರರಾಗಿದ್ದು, 3ನೇ ಎದುರುದಾರರ ನಿವೃತ್ತಿ ದಿ: 30/04/2039, 4ನೇ ಎದುರುದಾರರ ನಿವೃತ್ತಿ ದಿ: 31/07/2039 ಮತ್ತು 5ನೇ ಎದುರುದಾರರ ನಿವೃತ್ತಿ ದಿ: 31/05/2035 ಆಗಿರುತ್ತದೆ. ಎದರುದಾರರುಗಳು ಕರ್ತವ್ಯದಲ್ಲಿ ಸಂಪೂರ್ಣ ನಿಷ್ಠೆ ತೋರಿಸದೆ ಕರ್ತವ್ಯಲೋಪವೆಸಗಿ, ಸರ್ಕಾರಿ / ಸಾರ್ವಜನಿಕ ನೌಕರರಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡು ಕ.ನಾ.ಸೇ. (ನಡತೆ) ನಿಯಮಗಳು 1966 ನಿಯಮ 3 (1)(i) ರಿಂದ (iii) (ಪ್ರಸ್ತುತ ಕ.ನಾ.ಸೇ. (ನಡತೆ) ನಿಯಮಗಳು 2021 ನಿಯಮ (i) ರಿಂದ (iv) ರನ್ವಯ ಕರ್ತವ್ಯಲೋಪವೆಸಗುವ ಮೂಲಕ ದುರ್ನಡತೆಯನ್ನು ಎಸಗಿರುವುದು ಮೇಲ್ನೋಟಕ್ಕೆ ಕಂಡುಬಂದಿರುತ್ತದೆ.

3, 4 ಮತ್ತು 5ನೇ ಎದುರುದಾರರುಗಳ ವಿರುದ್ಧ ಶಿಸ್ತು ನಡವಳಿಕೆ ಹೂಡಲು ಮತ್ತು ಇಲಾಖಾ ವಿಚಾರಣೆಯನ್ನು ಮಾಡಲು ಕರ್ನಾಟಕ ನಾಗರಿಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿ 1957 ನಿಯಮ 14(ಎ)ರಡಿ ವಿಚಾರಣೆ ನಡೆಸಲು ಈ ಪ್ರಾಧಿಕಾರಕ್ಕೆ ಒಪ್ಪಿಸುವಂತೆ ಕರ್ನಾಟಕ ಲೋಕಾಯುಕ್ತ ಕಾಯ್ದೆ 12(3)ರನ್ವಯ ಪ್ರದತ್ತವಾದ ಅಧಿಕಾರದಡಿ, ಈ ವರದಿ ಮೂಲಕ ಸಕ್ಷಮ ಪ್ರಾಧಿಕಾರಕ್ಕೆ ಶಿಫಾರಸು ಮಾಡಲಾಗಿದೆ.

6. ಮುಂದುವರೆದು, ಕರ್ನಾಟಕ ಲೋಕಾಯುಕ್ತ ಕಾಯಿದೆ 1984 ಕಲಂ 12(4)ರ ಪ್ರಕಾರ ಸಕ್ಷಮ ಪ್ರಾಧಿಕಾರವು ಈ ವರದಿಯ ಮೇಲೆ ಏನು ಕ್ರಮ ಕೈಗೊಂಡಿದೆ ಅಥವಾ ಏನು

ಸಂ.ಕಂಪ್ಲೇಂಟ್/ಲೋಕ್/ಬಿಜಿಎಂ/3003/2022
ಪಿ.ಓ. ಎ.ಆರ್.ಇ-06

ಕ್ರಮ ಕೈಗೊಳ್ಳಲಾಗುತ್ತದೆ ಎಂಬುದರ ಬಗ್ಗೆ, ಈ ವರದಿಯನ್ನು ಸ್ವೀಕರಿಸಿದ **ಮೂರು ತಿಂಗಳೊಳಗೆ** ಈ ಪ್ರಾಧಿಕಾರಕ್ಕೆ ತಿಳಿಸಲು ಹೇಳಿದೆ.

ಸಂಬಂಧಪಟ್ಟ ದಾಖಲೆಗಳನ್ನು ಲಗತ್ತಿಸಿದೆ.

10/2/23

(ನ್ಯಾಯಮೂರ್ತಿ ಬಿ.ಎಸ್. ಪಾಟೀಲ್)
ಲೋಕಾಯುಕ್ತರು,
ಕರ್ನಾಟಕ ರಾಜ್ಯ, ಬೆಂಗಳೂರು.